ಕಲ್ಯಾಣ ಕಿರಣ

ಬರ್ - 2009

ಬೆಲೆ-ರೂ.10/-



ಬಸವಯೋಗಿ ಸಿದ್ಧರಾಮೇಶ್ವರರು

ನೆನಹು : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ 15 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ, ಅಳವಡಿಸಿಕೊಂಡು ತಪ್ಪದೇ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ವ್ಯಕ್ತಿ ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿ ಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ- ಪೂಜೆ ಮಾಡಿರಿ. ಶಿವರಾತ್ರಿ ಯಂದು ಬೆಳಗ್ಗೆ ವಿಶಾಲವಾದ ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 11 ರಿಂದ 15 ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ -ಮಧುವಯ್ಯ- ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದಡೆ ಸೇರಿ ಹಾಡಿ ಪಾಡಿ ನಲಿಯ ಬೇಕೆಂದು ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ- ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ - ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ ನಿಮ್ಮ ಹೃದಯ -ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ -ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯ ಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ - ಬಸವಣ್ಣ

(ಗ್ರಹಿಸಿದವರು-ಬಸವಾತ್ಮಜೆ ಮಾತಾಜಿ)

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-39 | ಬಸವ ಶಕೆ -876 | ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-12 | ಡಿಸೆಂಬರ್- 2009 | ವಾರ್ಷಿಕ ಚಂದಾ 100/- ರೂ.

ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು || ಪ ||

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು || ಅ.ಪ.||

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಸುಗಳ ತೂಗಿ || 1 ||

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ || 2 ||

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು || 3 ||

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? || 4 ||

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು || 5 ||

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು || 6 ||

-ಮಾತಾಜಿ

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡತೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2010ರಂದು ವ್ರತವನ್ನು ಪೂರ್ಣಗೊಳಿಸಬೇಕು.

1. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು ಪ್ರಾರಂಭ
2. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
3. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, ಕಾರ್ಡ್‌ರೋಡ್
2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು -560010

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥



866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಇಪ್ಪತ್ಮೂರನೆಯ

ಶರಣ ಮೇಳ

2010ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣ
ನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ
ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ
ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾ
ನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ
ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ
ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ)
ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು
16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ
ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ
ನಡೆಯುತ್ತಲಿದ್ದು ಇಪ್ಪತ್ಮೂರನೆಯ ಶರಣ ಮೇಳವು 2010ರ ಜನವರಿ 11, 12, 13, 14ಮತ್ತು
15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ
ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10
ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ
ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು
ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ.
ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು
10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚ
ರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ
ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು
ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ.
11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ
ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು
ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷ
ದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ,
ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ
ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ

ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ
ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

- ಮಾತಾಜಿ

ಸಂಪಾದಕೀಯ :

1. ಜೈನ ದಿಗಂಬರ ಮುನಿ ಮತ್ತು ಭದ್ರತಾ ವ್ಯವಸ್ಥೆ

ಒಂದು ದಿವಸ ಆಸ್ಥಾ ವಾಹಿನಿಯನ್ನು ನೋಡುತ್ತಿರುವಾಗ ಓರ್ವ ದಿಗಂಬರ ಜೈನ ಮುನಿಗಳ ಉಪನ್ಯಾಸ ಜರುಗುತ್ತಿತ್ತು. ಒಬ್ಬರಿಗೊಬ್ಬರು ತಾಗದಂತೆ ಮೂವರು ಮುನಿಗಳು ಕುಳಿತಿದ್ದರು. ಉಪನ್ಯಾಸ ಮಾಡುವ ದಿಗಂಬರ ಮುನಿಗಳಿಗೆ ಸ್ವಲ್ಪ ದೂರದಲ್ಲಿ ಅವರ ಸಮಾನ ರೇಖೆಯಲ್ಲೇ ಒಬ್ಬ ಅರೆ ಮಿಲಿಟರಿ ಪಡೆಯ ಯೋಧ ಸಮವಸ್ತ್ರದಲ್ಲಿ ನಿಂತಿದ್ದ. ಅವನು ಭದ್ರತಾ ಪಡೆಯ ಯೋಧ; ಆ ದೃಶ್ಯ ನೋಡಿ ಮನಸ್ಸಿಗೆ ಬಹಳ ಕೆಟ್ಟೆನಿಸಿತು. ಮೂವರು ಜ್ಞಾನಿಗಳು , ತ್ಯಾಗಿಗಳೂ ಆದ ದಿಗಂಬರ ಮುನಿಗಳ ಮಧ್ಯೆ ಒಬ್ಬ ಭದ್ರತಾ ಪಡೆಯ ಯೋಧ!

ಸ್ವಾಮಿಗಳು, ಸನ್ಯಾಸಿಗಳು, ಮುನಿಗಳಲ್ಲಿ ಹೊಸದಾಗಿ ಜೀವ ಭಯ ಏಕೆ ಹುಟ್ಟುತ್ತಿದೆ? ಸರ್ಕಾರಗಳೇ ಜೀವಭಯ ಹುಟ್ಟಿಸುತ್ತಲಿವೆಯೆ ? ಜೀವನದ ಹಂಗು ತೊರೆದು ಮೈಮೇಲಿನ ಬಟ್ಟೆಯ ಮೋಹವನ್ನೂ ಬಿಟ್ಟ ದಿಗಂಬರ ಮುನಿಗೆ ಲೌಕಿಕ ಅಂಗರಕ್ಷಕ ಬೇಕೆ?

ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೆ
ಮಾಯಾ ಮಂಜರ ಕೊಲುವಡೆ ನಿನ್ನ ಹಂಜರ ಕಾವುದೆ,
ಲಿಂಗದೇವನಲ್ಲದೆ ?

ಎಂಬ ಗುರು ಬಸವಣ್ಣನವರ ವಾಣಿ ನೆನಪಾಗುತ್ತದೆ.

ಗಂಗಾ ನದಿಯ ತೀರದಲ್ಲಿ ಓರ್ವ ಸಾಧು ಇದ್ದ. ಅವನು ಮೈಮೇಲಿನ ಬಟ್ಟೆಯ ಹೊರತು ಇನ್ನೇನನ್ನು ಇಟ್ಟುಕೊಂಡಿರಲಿಲ್ಲ. ತಾನು ಮಹಾತ್ಯಾಗಿ ಎಂಬ ಹಮ್ಮು ಅವನಿಗಿತ್ತು. ಭಿಕ್ಷಾ ಪಾತ್ರೆಯಲ್ಲಿ ಭಿಕ್ಷೆಯ ತಂದು ನದಿಯ ದಂಡೆಯ ಮೇಲಿದ್ದ ಒಂದು ಬಂಡೆಯ ಮೇಲೆ ಆ ಆಹಾರವನ್ನು ಹಾಕಿಕೊಂಡು ತಿನ್ನುತ್ತಿದ್ದ. ತಾನು ಊಟದ ತಟ್ಟೆ ಸಹ ಇಟ್ಟುಕೊಂಡಿಲ್ಲ ಎಂಬ ಹೆಮ್ಮೆ ಅವನಲ್ಲಿತ್ತು.

ಒಂದು ದಿನ ಒಬ್ಬ ಹೊಸ ಸಾಧು ಆ ಜಾಗಕ್ಕೆ ಬಂದ. ಸಮತಟ್ಟಾಗಿದ್ದ ಆ ಬಂಡೆಯನ್ನು ತೊಳೆದು ಅದರ ಮೇಲೆ ಊಟಕ್ಕೆ ಕುಳಿತು ತಾನು ತಂದ ಭಿಕ್ಷೆಯನ್ನು ಉಣ್ಣತೊಡಗಿದ. ಅಷ್ಟು ಹೊತ್ತಿಗೆ ಮೊದಲನೆಯ ಸಾಧು ಬಂದವನೆ ಕೋಪದಿಂದ, "ನನ್ನ ಬಂಡೆಯ ಮೇಲೆ ನೀನು ಕುಳಿತುದೇಕೆ?" ಎಂದು ಕೂಗಾಡಿದ. ಹೊಸ ಸಾಧುವಿಗೆ ಅಚ್ಚರಿಯಾಯಿತು. ಇದು ನಿನ್ನದು ಹೇಗೆ? ಎಂದು ಪ್ರಶ್ನಿಸಿದ. "ನಾನು ಒಂದು ಊಟದ ತಟ್ಟೆ ಸಹ ಇಟ್ಟುಕೊಳ್ಳದ ನಿರ್ಮೋಹಿ. ಈ ಬಂಡೆಯ ಮೇಲೆ 20 ವರ್ಷಗಳಿಂದ ಊಟ ಮಾಡುತ್ತಿದ್ದೇನೆ. ಖಾಲಿ ಮಾಡು". ಎಂದ ಹಳೆಯ ಸಾಧು. ಆಗ ಹೊಸಬ ಹೇಳಿದ : "ಅಯ್ಯಾ, ತಟ್ಟೆ -ಲೋಟ ತೊರೆದು ದೊಡ್ಡ ಬಂಡೆಯನ್ನು ಕೊರಳಿಗೆ ಕಟ್ಟಿಕೊಂಡಿದ್ದೀಯಲ್ಲ! ಎಂಥ ವಿಚಿತ್ರವಿದು?" ಎಂದ.

ಹೀಗೆ ನಾನು ಅದನ್ನು ಬಿಟ್ಟೆ, ಇದನ್ನು ಬಿಟ್ಟೆ ಎಂಬ ಹಮ್ಮನ್ನು ಬಿಡದಿರುವುದು ಮತ್ತು ದಿವ್ಯ ದಿಗಂಬರಿಯಾಗಿ ಜೀವ ಭಯವಿದೆಯೇನೋ ಎಂಬಂತೆ ಭದ್ರತಾ ಪಡೆಯನ್ನು ಸನಿಹದಲ್ಲಿರಿಸಿಕೊಳ್ಳುವುದು ಹಾಸ್ಯಾಸ್ಪದವಲ್ಲವೆ?

2. ವಿರಕ್ತ ಸ್ವಾಮಿಗಳು ಮತ್ತು ಯಜ್ಞಾಹುತಿ.

ಪೂಜ್ಯ ಶ್ರೀ ಶಿವರುದ್ರ ಸ್ವಾಮಿಗಳು, ಬೇಲಿ ಮಠ, ಬೆಂಗಳೂರು ಇವರಿಗೆ ದಿ. 10-11 -2009 ರಂದು ಒಂದು ಪತ್ರವನ್ನು ಬರೆದು ಅದರ ಪ್ರತಿಯನ್ನು ನನಗೂ ಓರ್ವ ಶರಣರು ಕಳಿಸಿದ್ದಾರೆ. ಅದರ ಸಾರ ಹೀಗಿದೆ: ದೂರದರ್ಶನ, ಕಸ್ತೂರಿ ವಾಹಿನಿ ದೇಗುಲ ಕಾರ್ಯಕ್ರಮದಲ್ಲಿ ಬಿತ್ತರಗೊಳ್ಳುತ್ತಿದ್ದ ಯಜ್ಞಕುಂಡದ ಹತ್ತಿರ ನೂರಾರು ವೈದಿಕರ ಸಮೂಹದಲ್ಲಿ ವಿರಕ್ತ ಪರಂಪರೆಯ ಚರಮೂರ್ತಿಗಳಾದ ಬೇಲಿ ಮಠದ ಶ್ರೀಗಳು ಇದ್ದುದು ಮತ್ತು ಅವರು ಯಜ್ಞ ಕುಂಡಕ್ಕೆ ಬಲಿ ಅರ್ಪಿಸುವುದು -ಇದನ್ನು ಕಂಡು ಆ ಶರಣರು ನೊಂದು, ಪ್ರತಿಭಟಿಸಿ ಶ್ರೀಗಳಿಗೆ ಪತ್ರ ಬರೆದಿದ್ದಾರೆ.

ಬೇಲಿ ಮಠದ ಶ್ರೀಗಳು ಇಷ್ಟೊಂದು ವೈದಿಕರ ದಾಸ್ಯಕ್ಕೆ ಏಕೆ ಒಳಗಾಗಿದ್ದಾರೆ ಎಂಬುದೇ

ಅರ್ಥವಾಗುತ್ತಿಲ್ಲ. ಎನ್ನವರಾದರೆ ಜನ್ನಕ್ಕೆ ನಡೆವರೆ? ಎಂದು ಧರ್ಮಗುರು ಬಸವಣ್ಣನವರು ಕೇಳುತ್ತಾರೆ. ಶ್ರೀಗಳು ಯಜ್ಞ ವಿರೋಧಿಯಾದ ಲಿಂಗಾಯತ ಧರ್ಮದ ಅನುಯಾಯಿಗಳು, ವಿರಕ್ತ ಮಠದ ಅಧಿಕಾರಿಗಳು, ಎಲ್ಲಕ್ಕಿಂತ ಮಿಗಿಲಾಗಿ ಬಸವ ಪಥ ಪತ್ರಿಕೆಯ ಸಂಪಾದಕರು. ಉಳಿದ ಪತ್ರಿಕೆಗಳ ಸಂಪಾದಕರು ಇರುವ ಬಗೆಯೇನೇ ಇರಲಿ ಬರಹ ಆದರ್ಶವಾಗಿರುತ್ತದೆ; ಅದರಂತೆ ನಡೆ ಇರಲಿಕ್ಕಿಲ್ಲ. ಧಾರ್ಮಿಕ ಪತ್ರಿಕೆಯ ವಿಷಯ ಹಾಗಲ್ಲ. ತಾವು ನಂಬಿದ್ದನ್ನು ಬರೆಯಬೇಕು, ಬರೆದಂತೆ ಆಚರಣೆಯನ್ನು ಅಳವಡಿಸಿಕೊಳ್ಳಬೇಕು.

ಧಾರವಾಡದ ರಾಷ್ಟ್ರೀಯ ಬಸವ ದಳದ ಶರಣರು ಓರ್ವ ಸಾಹಿತಿಯನ್ನು ಶ್ರಾವಣ ಮಾಸದ ಕಾರ್ಯಕ್ರಮಕ್ಕೆ ಆಹ್ವಾನಿಸಿಲು ಹೋಗಿದ್ದರಂತೆ. ಚರ್ಚೆ ಸಾಗಿತು. ಇಷ್ಟಲಿಂಗದ ಹಿರಿಮೆ ಇತ್ಯಾದಿ ಕುರಿತು ಅವರ ಲೇಖನಗಳು ಬಹಳ ಪ್ರಭಾವ ಶಾಲಿಯಾಗಿದ್ದವು. ದುರ್ದೈವವೆಂದರೆ ಅವರು ಲಿಂಗಾಯತ ಧರ್ಮೀಯರಾಗಿದ್ದರೂ ಇಷ್ಟಲಿಂಗವನ್ನು ಧರಿಸಿರಲಿಲ್ಲ. ಆಗ ಇವರು ಕೇಳಿದರಂತೆ "ನೀವು ಪರಿಣಾಮಕಾರಿಯಾಗಿ ಲೇಖನ ಬರೆದು ನಮಗೆ ಪ್ರೇರಣೆ ನೀಡುವಿರಿ. ನೀವೆ ಇಷ್ಟಲಿಂಗ ಧರಿಸಿಲ್ಲವಲ್ಲ?" ಆಗ ಅವರು ಹೀಗೆ ಉತ್ತರಿಸಿದರಂತೆ, "ನಾವು ಸಾಹಿತಿಗಳು; ಬರೆಯುವುದಷ್ಟೇ ಕೆಲಸ. ಅನುಷ್ಠಾನ ಮಾಡಬೇಕಾದವರು ನೀವು!" ಉತ್ತರ ಎಷ್ಟು ವಿಲಕ್ಷಣವಾಗಿದೆಯಲ್ಲವೆ? ಅದಕ್ಕೆ ಧರ್ಮಪಿತರು ಹೇಳುವುದು "ನುಡಿದರೆ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಸಲಾಕೆಯಂತಿದ್ದರೆ ಸಾಲದು, ಅದು ಲಿಂಗ ಮೆಚ್ಚಿ ಅಹುದಹುದೆನ್ನಬೇಕು. ಮತ್ತು ನುಡಿಯೊಳಗಾಗಿ ನಡೆಯದಿದ್ದರೆ ಲಿಂಗದೇವನು ಎಂತೊಲಿವನು?" ಎಂದು.

ಬೇಲಿ ಮಠದ ಶ್ರೀಗಳು ಕೇವಲ ಸಾಹಿತಿಗಳಲ್ಲ; ಮೇಲೆ ಕಾಣಿಸಿದ ಸಾಹಿತಿ ಹಾರಿಕೆಯ ಉತ್ತರ ನೀಡಿ ತಪ್ಪಿಸಿಕೊಂಡಂತೆ ಇವರು ತಪ್ಪಿಸಿಕೊಳ್ಳಲು ಬರದು. ಒಬ್ಬ ಮಠಾಧಿಪತಿಗಳಾಗಿ ಜವಾಬ್ದಾರಿ ಸ್ಥಾನದಲ್ಲಿದ್ದಾರೆ.

ಭಾಗವಹಿಸುವುದರಲ್ಲಿ ಎಚ್ಚರಿಕೆ

ಅನೇಕರು ಆಹ್ವಾನ ನೀಡಬಹುದು. ಭಾಗವಹಿಸುವಾಗ ತನ್ನ ಧರ್ಮ, ತತ್ವ, ಸಿದ್ಧಾಂತಗಳಿಗೆ ಚ್ಯುತಿ ಬರುತ್ತಿದೆಯೋ ಇಲ್ಲವೋ ಎಂಬುದನ್ನು ಭಕ್ತರು ಮತ್ತು ಮಠಾಧಿಪತಿಗಳು ಎಚ್ಚರಿಕೆಯಿಂದ ಗಮನಿಸಬೇಕು. ಯೋಗ - ಧ್ಯಾನ ಮುಂತಾದ ಅಧ್ಯಾತ್ಮಿಕ ಕಾರ್ಯಕ್ರಮಗಳಾದರೆ ಸರಿ; ಗೋಹತ್ಯ ನಿಷೇಧ, ಬಿಸಿಯೂಟದಲ್ಲಿ ಮಕ್ಕಳಿಗೆ ಕೋಳಿ ಮೊಟ್ಟೆ ಕೊಡುವ ಯೋಜನೆಯ ಪ್ರತಿಭಟನೆ ಇಂತಹುಗಳಲ್ಲಿ ಭಾಗವಹಿಸುವುದು ತಾತ್ವಿಕ ವಿರೋಧಕ್ಕೆ ಕಾರಣವಾಗದು. ಯಜ್ಞ -ಯಾಗ ಪ್ರಾಣಬಲಿ, ನವಗ್ರಹ ಪೂಜೆ ಮುಂತಾದುವುಗಳಲ್ಲಿ ಎಂತಹ ಪ್ರಸಂಗದಲ್ಲೂ ಲಿಂಗಾಯತ ಸ್ವಾಮಿಗಳು ಭಾಗವಹಿಸಬಾರದು. ವೈದಿಕಾಚರಣೆಗಳಲ್ಲಿ ಭಾಗವಹಿಸಿ ತಮ್ಮ ಧರ್ಮಕ್ಕೆ ದ್ರೋಹ ಬಗೆಯುವುದಲ್ಲದೆ ಸಮಾಜ ಬಾಂಧವರಿಗೆ ಮಠಾಧಿಪತಿಗಳು ತಪ್ಪು ಸಂದೇಶವನ್ನು ರವಾನಿಸಿದಂತಾಗುತ್ತದೆ.

ಇಂದು ನನಗೆ ಒಂದು ಬಹುದೊಡ್ಡ ಚಿಂತೆ ಕಾಡುತ್ತಲಿದೆ. ಲಿಂಗಾಯತ ಧರ್ಮವನ್ನು ಉಳಿಸಿಕೊಳ್ಳಬೇಕೋ ಅಥವಾ ಲಿಂಗಾಯತ ಸಮಾಜವನ್ನು ಉಳಿಸಿಕೊಳ್ಳಬೇಕೋ ಎಂಬುದೇ ಆ ಚಿಂತೆ. ಓರ್ವ ಪಾಶ್ಚಿಮಾತ್ಯ ವಿದ್ವಾಂಸ ಹೇಳುವಂತೆ ಲಿಂಗಾಯತ ಧರ್ಮವು ಹಿಂದೂ ಸಮಾಜದ ಸಮುದ್ರದೊಳಗೆ ಒಂದು ದ್ವೀಪದಂತಿದೆ. ಅದು ನಿಧಾನವಾಗಿ ಕರಗಿ ಹೋಗುತ್ತಿದೆ. ಇತ್ತ ವೈದಿಕಾಚರಣೆಯ ಅಲೆಗಳ ಹೊಡೆತದಿಂದ ರಕ್ಷಿಸುವ ಕಳಕಳಿಯಾಗಲಿ, ಚಿಂತನೆಯಾಗಲಿ, ಆತ್ಮವಿಶ್ವಾಸವಾಗಲಿ ಧಾರ್ಮಿಕ ಮುಂದಾಳುಗಳಾದ ಮಠಾಧೀಶರಲ್ಲಿ ಇಲ್ಲವಾಗಿರುವುದರಿಂದ ಲಿಂಗಾಯತ ಧರ್ಮ ಅರ್ಥಾತ್ ಬಸವ ಧರ್ಮ ಇಂದು ವಿಪತ್ತಿಗೆ ಸಿಕ್ಕಿದೆ. ಆದ್ದರಿಂದ ಲಿಂಗಾಯತ ಧರ್ಮವನ್ನಾದರೂ ನಾಲ್ಕೇ ಜನರಲ್ಲಿ ಅದರ ಶುದ್ಧ ರೂಪದಲ್ಲಿ ಉಳಿಸಿಕೊಂಡರೆ ಯಾರಾದರೂ ಪ್ರಾಮಾಣಿಕ ಕಳಕಳಿಯುಳ್ಳ ನವ ದೀಕ್ಷಿತರಾದರೂ ಸಂರಕ್ಷಿಸಬಲ್ಲರೆಂಬ ಭರವಸೆ ಇಡಬಹುದೆ?

ಬೇಲಿ ಮಠದ ಶ್ರೀಗಳಂತಹ ಎರಡು ಕುದುರೆಗಳ ಮೇಲೆ - ವೈದಿಕ ಧರ್ಮ - ಲಿಂಗಾಯತ

ಸಮಾಜ, ಸವಾರಿ ಮಾಡುವವರು ಒಂದು ನಿರ್ಧಾರಕ್ಕೆ ಬರಬೇಕು. ಊಟ - ಕಾಣಿಕೆ -ಪ್ರಚಾರ ಕೊಡಲು ಲಿಂಗಾಯತ ಸಮಾಜ ಬೇಕು, ಆಚರಣೆಗೆ ವೈದಿಕ ಧರ್ಮಬೇಕು ಎಂಬ ವಿರೋಧಾಭಾಸದ ದ್ವಂದ್ವ ನಿಲುವು ಸರಿಯಲ್ಲವಾದರೂ ಯಾವುದಾದರೂ ಒಂದು ಕುದುರೆ ಹತ್ತಲಿ. ಸಾಮಾಜಿಕವಾಗಿ ಎಲ್ಲ ಧರ್ಮ, ಜಾತಿಗಳವರೊಡನೆ ಹೊಂದಿಕೊಂಡು ಹೋಗುವುದು ಈ ದೇಶದಲ್ಲಿ ಅನಿವಾರ್ಯ. ಅದರರ್ಥ ತನ್ನ ಧರ್ಮವನ್ನು ಬಿಡಬೇಕಾಗಿಲ್ಲ ಅಥವಾ ಯಾರನ್ನೋ ಮೆಚ್ಚಿಸಲು ತನ್ನ ಧರ್ಮಕ್ಕೆ ವಿರುದ್ಧವಾಗಿ ನಡೆಯಬೇಕೆಂದೇನೂ ಇಲ್ಲ. ಮುಖ್ಯವಾಗಿ ಬೇಕಾದುದು ಪಾತಿವ್ರತ್ಯಪೂರ್ಣ ಭಕ್ತಿ. ಸೃಷ್ಟಿಕರ್ತ ಲಿಂಗದೇವನನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸುವ ಕೈಯಿಂದ ಅಗ್ನಿಗೆ ಆಹುತಿ ಕೊಡುವುದು ಸರಿಯಲ್ಲ.

ಚತುರ್ವರ್ಣ ವ್ಯವಸ್ಥೆ, ಅದರ ವಿಷಫಲಗಳಾದ ಶೂದ್ರತ್ವ, ಅಸ್ಪೃಶ್ಯತೆ ಮೂಢನಂಬಿಕೆಯ ಆಗರವಾದ ಜೋತಿಷ್ಯ, ಬಹುದೇವತೋಪಾಸನೆ ಇವುಗಳಿಂದ ಬಳಲಿ ಬೆಂಡಾಗಿರುವ ಸಾಕಷ್ಟು ಜನ ಹಿಂದುಳಿದ ವರ್ಗಗಳವರು, ದಲಿತರು, ಶೋಷಿತರು ಶುದ್ಧ ದೇಶೀಯ ಧರ್ಮದ ಆಸರೆಯನ್ನು ಬಯಸುತ್ತಿದ್ದಾರೆ. ಅಂಥ ಧರ್ಮವನ್ನು ಗುರು ಬಸವಣ್ಣನವರು ಕೊಟ್ಟಿದ್ದಾರೆ. ಇದು ಬಹಳ ಜನರಿಗೆ ಆಶಾಕಿರಣವಾಗಿದೆ. ಬೇಲಿ ಮಠದ ಶ್ರೀಗಳು ಮತ್ತು ವೈದಿಕಾಚರಣೆಗೆ ಬದ್ಧರಾದ ಇನ್ನೂ ಅನೇಕ ಮಠಾಧೀಶರು ಒಂದು ತತ್ವಕ್ಕೆ ಬದ್ಧರಾಗಬೇಕು. ತಮ್ಮ ತಪ್ಪು ತಪ್ಪು ನಡೆಗಳಿಂದ ಲಿಂಗಾಯತ ಧರ್ಮದ ಬಗ್ಗೆ ತಪ್ಪು ಕಲ್ಪನೆ ಹುಟ್ಟಿಸಿ ಅದರ ಕ್ರಾಂತಿಕಾರಿ ಸ್ವರೂಪವನ್ನು ವಿಕೃತಗೊಳಿಸುವುದು ಬೇಡ. "ತನು ಭಕ್ತ, ಮನ ಭವಿ" ಯಾಗುವ ದ್ವಂದ್ವಾಚರಣೆ ಏಕಪಾತ್ರಾಭಿನಯ (ಅತ್ತ ತಿರುಗಿ ಒಂದು ಡೈಲಾಗ್ ಇತ್ತ ನಿಂತು ಇನ್ನೊಂದು ಡೈಲಾಗ್) ಸಲ್ಲದು. ತಮಗೆ ಬಸವ ತತ್ವದಲ್ಲಿ ದೃಢನಂಬಿಕೆ ಇಲ್ಲದಿದ್ದರೆ ಬಸವ ತತ್ವದ ಪತ್ರಿಕೆಯಾದ "ಬಸವ ಪಥ"ದಲ್ಲಿ ಬರೆದಂತೆ, "ಬಸವಣ್ಣನ ಬದುಕು ಬದುಕ ಬೇಕು ಆಗ ಮಾತ್ರ ನಾವು ಸಹ ನಮ್ಮ ಮುಂದಿನ ಪೀಳಿಗೆಗೆ ಆದರ್ಶರಾಗಬಲ್ಲೆವು". (ಅಕ್ಟೋಬರ್ 2009-ಬಸವ ಪಥ) ಎಂದೆಲ್ಲ ಬರೆಯುವುದು ಬೇಡ. ನಾವುಗಳು ಪೇಜಾವರ ಶ್ರೀಗಳು ಶೃಂಗೇರಿ ಶ್ರೀಗಳಿಗೆ ವೈದಿಕ ಧರ್ಮ ಬಿಡಿ ಎಂದು ಹೇಳಲು ಹೋಗುತ್ತೇವೆಯೇ? ಬೇಲಿ ಮಠದ ಶ್ರೀಗಳಿಗೆ -ಅವರು ಇಷ್ಟಲಿಂಗ ಧರಿಸುವ ವಿರಕ್ತ ಸಂಪ್ರದಾಯದವರಾದ ಕಾರಣ ಹೇಳುವ ಕಳಕಳಿ ತೋರಬೇಕಾಗಿದೆ.

ಕಲ್ಯಾಣ ಕಿರಣ ಚಂದಾದಾರರಲ್ಲಿ ಮನವಿ

ಕಲ್ಯಾಣ ಕಿರಣ ಸಕಾಲದಲ್ಲಿ ತಲುಪದಿರುವುದಕ್ಕೆ ಸರಿಯಾದ ವಿಳಾಸವಿಲ್ಲದಿರುವುದು ಕಾರಣವಾಗಿದ್ದು ಪ್ರತಿ ತಿಂಗಳು ಸುಮಾರು 100 - 150ರವರೆಗೆ ಪ್ರತಿಗಳು ವಾಪಸ್ಸಾಗುತ್ತವೆ. ಆದ್ದರಿಂದ ದಯವಿಟ್ಟು ಸರಿಯಾದ ವಿಳಾಸ ಮತ್ತು ಪಿನ್‌ಕೋಡ್ ಹಾಗೂ ತಮ್ಮ ದೂರವಾಣಿ ಸಂಖ್ಯೆಗಳನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿ. ಶರಣ ಮೇಳದಲ್ಲಿ ವಿಶೇಷ ಕೌಂಟರ್ ತೆರೆಯಲಾಗಿದ್ದು ಅಲ್ಲಿ ತಮ್ಮ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಬೇಕಾಗಿ ವಿನಂತಿ ಹಾಗೂ ಕಲ್ಯಾಣ ಕಿರಣದ ಯಾವುದೇ ಸಮಸ್ಯೆಯಿರುವವರು ಈ ಕೆಳಗೆ ನಮೂದಿಸಿದ ಜಂಗಮ ದೂರವಾಣಿಗಳಿಗೆ ಎಸ್.ಎಂ.ಎಸ್. (ಮೆಸೇಜ್) ಅಥವಾ ಕರೆ ಮಾಡಿ ನಿಮ್ಮ ವಿಳಾಸಗಳನ್ನು ತಿಳಿಸಬೇಕಾಗಿ ಕೋರುತ್ತೇವೆ.

ದೂರವಾಣಿಗಳ ಸಂಖ್ಯೆಗಳು: 9620058492, 9036351066, 9481249857, 9972222644

ಬಾಳೊಂದು ವರ ಬದುಕೊಂದು ಕಲೆ

1. ಬೇಡುವಾತ ಭಕ್ತನಲ್ಲ

"ಓಡಲಾಗದು ಲೆಂಕನು, ಬೇಡಲಾಗದು ಭಕ್ತನು", ಇದು ಗುರು ಬಸವಣ್ಣನವರ ದಿವ್ಯವಾಣಿ. ಶೂರನಾದ ಯೋಧನು ಶತ್ರುವನ್ನು ಯುದ್ಧದಲ್ಲಿ ಎದುರಿಸಬೇಕು. ಪ್ರಾಣವನ್ನಾದರೂ ತೆರಬೇಕೇ ವಿನಾ ಹೇಡಿಯಂತೆ ಬೆನ್ನು ತೋರಿಸಿ ಜೀವಗಳ್ಳನಾಗಿ ಓಡಬಾರದು. ಅದೇ ರೀತಿ ಭಕ್ತನು ದುಡಿದು ತನ್ನ ಅನ್ನವನ್ನು ತಾನು ಗಳಿಸಿಕೊಂಡು ತಿನ್ನಬೇಕೇ ಹೊರತು ಬೇಡುವ ವೃತ್ತಿಯನ್ನು ಅವಲಂಬಿಸಬಾರದು. ಇದಕ್ಕೊಂದು ಸುಂದರ ದೃಷ್ಟಾಂತವಿದೆ.

ಒಂದು ಊರಿನಲ್ಲಿ ಒಂದು ದೊಡ್ಡ ದೇವಾಲಯವಿತ್ತು. ಅದರ ಮುಂದೆ ಅನೇಕ ಭಿಕ್ಷುಕರು ಸಾಲಾಗಿ ಕುಳಿತುಕೊಳ್ಳುತ್ತಿದ್ದರು. ದಿನ ನಿತ್ಯವೂ ಒಬ್ಬ ಶ್ರೀಮಂತರು ಗುಡಿಯೊಳಗೆ ಹೋಗಿ ಪೂಜೆ ಸಲ್ಲಿಸಿ ಹೊರಬಂದು ಎಲ್ಲ ಭಿಕ್ಷುಕರಿಗೆ ಎರಡು ರೂಪಾಯಿ ನೀಡಿ ಹೋಗುತ್ತಿದ್ದರು. ಮುದುಕರು, ಅಂಗವಿಕಲರು ಮುಂತಾದವರ ಮಧ್ಯೆ ಇಬ್ಬರು ತರುಣರೂ ಇದ್ದರು. ಆ ಶ್ರೀಮಂತ ಕೊಡುವ ಎರಡು ರೂಪಾಯಿ ಇನ್ನಿತರರು ನೀಡುವ ಭಿಕ್ಷೆಯಿಂದ ಅಂದಂದಿನ ಊಟದ ಸಮಸ್ಯೆ ಬಗೆ ಹರಿಯುತ್ತಿತ್ತು.

ಒಂದು ದಿವಸ ಆ ಶ್ರೀಮಂತ ಬಂದು ಹೇಳಿದ, ಕಾಶಿಗೆ ವಿಶ್ವನಾಥನ ದರ್ಶನಕ್ಕೆ ತಾನು ಹೋಗುತ್ತಿರುವುದಾಗಿಯೂ, ಕಾಲು ನಡಿಗೆಯಿಂದ ಹೋಗಿ ಬರಲು ಕನಿಷ್ಠ ಆರು ತಿಂಗಳು ಹಿಡಿಯುವುದಾಗಿಯೂ, ದಿನ ನಿತ್ಯ ಕೊಡುತ್ತಿದ್ದ ಎರಡು ರೂಪಾಯಿಗಳನ್ನು ಒಟ್ಟಿಗೆ ಸೇರಿಸಿ ಎರಡು ನೂರು ರೂಪಾಯಿಗಳನ್ನು ಕೊಡುತ್ತಿರುವುದಾಗಿಯೂ ಹೇಳಿ, ಕೊಟ್ಟು ಹೋದ. ಯಶಸ್ವಿಯಾಗಿ ಪ್ರವಾಸ ಮುಗಿಸಿ ಅವನು ವಾಪಸ್ಸು ಬಂದು ದಿನ ನಿತ್ಯದಂತೆ ಭಿಕ್ಷೆ ಕೊಡಲು ಹೋದ. ಆಗ ಇಬ್ಬರು ತರುಣರಲ್ಲಿ ಒಬ್ಬನೇ ಕುಳಿತಿದ್ದ. ಅದೇ ದೀನಾವಸ್ಥೆಯಲ್ಲಿದ್ದ. ನಿತ್ಯದಂತೆ ಭಿಕ್ಷೆ ಪಡೆದ. ನಿನ್ನ ಇನ್ನೊಬ್ಬ ಮಿತ್ರ ಎಲ್ಲಿ ಹೋದ? ಎಂದು ಆ ಶ್ರೀಮಂತ ದಾನಿ ಕೇಳಿದ. ಅವನು ಎದುರುಗಡೆ ಇದ್ದ ಪೆಟ್ಟಿಗೆ ಅಂಗಡಿಯನ್ನು ತೋರಿಸಿದ. ಅಷ್ಟರಲ್ಲಿ ಆ ಅಂಗಡಿಯಾತ ಶ್ರೀಮಂತ ವಾಪಸ್ಸು ಬಂದಿರುವ ಸುದ್ದಿ ತಿಳಿದು, ಒಂದು ಹೂ ಮಾಲೆಯೊಡನೆ ಬಂದು ಮಾಲೆ ಹಾಕಿ ಪಾದಕ್ಕೆ ನಮಸ್ಕರಿಸಿದ. ಶ್ರೀಮಂತ ಚಕಿತನಾದ. ಆ ಅಂಗಡಿಯಾತ ಹೇಳಿದ, "ನಿಮ್ಮಿಂದ ಭಿಕ್ಷೆ ಪಡೆಯುತ್ತಿದ್ದ ಆ ಭಿಕ್ಷುಕನ ಮಿತ್ರ ನಾನೆ. ನೀವು ಒಟ್ಟಿಗೆ ಕೊಟ್ಟ ಹಣವನ್ನು ಬಂಡವಾಳವಾಗಿ ಮಾಡಿಕೊಂಡು ನಾನು ಹೂವು -ಕಾಯಿ- ಕರ್ಪೂರ, ಊದಿನ ಕಡ್ಡಿ ಇಟ್ಟುಕೊಂಡು ಮಾರಲು ಆರಂಬಿಸಿದೆ. ಲಾಭ ಬಂದಂತೆಲ್ಲ ವ್ಯಾಪಾರ ವರ್ಧಿಸಿಕೊಂಡು ಈಗ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದೇನೆ. ಇದೆಲ್ಲ ನಿಮ್ಮ ಕೊಡುಗೆ" ಎಂದ ಕೃತಜ್ಞತೆಯಿಂದ. ಶ್ರೀಮಂತ ಮೂಕ ವಿಸ್ಮಿತನಾದ.

ನೀತಿ : ಭಿಕ್ಷುಕ ವೃತ್ತಿಯನ್ನೇ ಅವಲಂಬಿಸಿ ಬದುಕಿದ ತರುಣ ಅದೇ ದೀನಾವಸ್ಥೆಯಲ್ಲಿ ಉಳಿದ. ಕಾಯಕವನ್ನು ಅವಲಂಬಿಸಿದ ತರುಣ ಪ್ರಗತಿಯನ್ನು ಸಾಧಿಸಿದ. ಕಾಯಕದಿಂದ ಗಳಿಸಿ ಅಂಬಲಿಯನ್ನು ಉಂಡರೆ ಅದೇ ಅಮೃತಾನ್ನ. ಭಿಕ್ಷುಕ ವೃತ್ತಿಯಿಂದ, ಪರಾವಲಂಬಿಯಾಗಿ ಅಮೃತಾನ್ನವನ್ನೇ ಉಂಡರೂ ಅದು ಋಣಗೂಳು. ಅದಕ್ಕಾಗಿಯೇ ಓರ್ವ ಶರಣೆ ಕಾಳವ್ವೆ ಹೇಳುತ್ತಾಳೆ: "ವ್ರತ ತಪ್ಪಲು ಸೈರಿಸ ಬಹುದು ಕಾಯಕ ತಪ್ಪಲು ಸೈರಿಸಲಾಗದು". ಎಂದು. ಎಂಥಾ ಚಿಕ್ಕ ಆದಾಯದ ಕಾಯಕವಾದರೂ ಸರಿ ಅದನ್ನು ಅವಲಂಬಿಸಬೇಕೇ ವಿನಾ ಸೋಮಾರಿಯಾಗಿ, ಪರಾವಲಂಬಿಯಾಗಿ ಬದುಕಬಾರದು.

2. ಸತ್ತ ನಂತರ ವೈಭವದ ಶ್ರಾದ್ಧ

ಆಧುನಿಕ ಯುಗ ಕೌಟುಂಬಿಕ ವ್ಯವಸ್ಥೆಯನ್ನು ಧ್ವಂಸಗೊಳಿಸಿದೆ. ಪಾಶ್ಚಿಮಾತ್ಯ ಜೀವನ ವಿಧಾನ ಭಾರತೀಯರ ಆದರ್ಶಗಳನ್ನು ಛಿದ್ರಗೊಳಿಸಿದೆ. ಒಂದು ಊರಿಗೆ ಹೋಗಿದ್ದೆ. ನಮ್ಮ ಆತ್ಮೀಯ ಭಕ್ತ ದಂಪತಿಗಳು ಖಿನ್ನರಾಗಿದ್ದರು. ಎಲ್ಲಾ ಕ್ಷೇಮವೆ ? ಮಗ ಸೊಸೆ ಮೊಮ್ಮಕ್ಕಳು ಚೆನ್ನಾಗಿರುವರೆ? ಎಂದು ಕೇಳಿದಾಗ ಆ ಶರಣೆಯ ಕಣ್ಣಲ್ಲಿ ನೀರು ತುಳುಕಿತು. ಅವರು ಬೇರೆ ಹೋಗಿದ್ದಾರೆ. ಮೊಮ್ಮಕ್ಕಳನ್ನು ಕರೆದುಕೊಂಡು ಬೇರೆ ಮನೆ ಮಾಡಿದ್ದಾರೆ. ನಾವಿಬ್ಬರೇ! ಮನೆಯಲ್ಲಿ ಭಣಭಣ.

ಹೊತ್ತೇ ಹೋಗದು."ಎಂದರು. ಮನಸ್ಸಿಗೆ ಬಹಳ ಖೇದವೆನಿಸಿತು. ಇವರೇನೂ ಕಾಟ ಕೊಡುವ ಸ್ವಭಾವದ ಅತ್ತೆ ಮಾವಂದಿರಲ್ಲ. ಎಂಥಾ ವಿಚಿತ್ರವಿದು! ಎನ್ನಿಸಿತು.

ಮತ್ತೊಬ್ಬ ಮುದುಕರು ಮಾತನಾಡುತ್ತ ಕುಳಿತಿದ್ದರು. ಅವರಿಗೆ ಹೆಣ್ಣು ಮಕ್ಕಳು ನಾಲ್ಕು ಜನ, ಮಗ ಮಾತ್ರ ಒಬ್ಬನೆ. ನಮ್ಮ ಜನರಲ್ಲಿ ಒಂದು ತಪ್ಪು ಕಲ್ಪನೆ ಏನೆಂದರೆ ಅಳಿಯನು ಅತ್ತೆ ಮಾವಂದಿರನ್ನು ಆಶ್ರಯಕೊಟ್ಟು ಸಲಹಲು ಸಿದ್ಧನಿದ್ದರೂ ಮಗಳು -ಅಳಿಯನ ಬಳಿ ಇರುವುದು ಅಸಂಪ್ರದಾಯ, ಹಂಗು. ಹೀಗಾಗಿ ಮಗನೇ ಆಸರೆಯಾಗಬೇಕು. ಸೊಸೆಗೆ, ತನ್ಮೂಲಕ ಮಗನಿಗೆ ತಾಯಿ ತಂದೆಗಳ ಸೇವೆ ಎಷ್ಟೂ ಇಷ್ಟವಿಲ್ಲ. ಅವರು ತಿರಸ್ಕಾರದಿಂದ ಕಾಣುತ್ತ ಮಹಡಿ ಮೇಲೆ ಮುದುಕರಿಬ್ಬರನ್ನು ಬಿಟ್ಟು ತಾವು ಕೆಳಗೆ ಇರುತ್ತಿದ್ದರು. ಹೆಂಡತಿಗೆ ಹೃದಯಾಘಾತವಾದಾಗ ಗಂಡ ಕೂಗಿಕೊಂಡರೂ ಮಗ -ಸೊಸೆ ಬರಲಿಲ್ಲ. ಅಳಿಯನಿಗೆ ಫೋನ್ ಮಾಡಿದರು. ಇದ್ದೂರಲ್ಲೇ ಇದ್ದ ಆತ ಬಂದು ಆಸ್ಪತ್ರೆಗೆ ಒಯ್ಯುವಷ್ಟರಲ್ಲಿ ಪ್ರಾಣ ಹೋಯಿತು. ಹೆಂಡತಿ ಸತ್ತ ಮೇಲಂತೂ ಮುದುಕನ ಪಾಡು ಹೇಳತೀರದು. ದೈಹಿಕವಾಗಿ, ಮಾನಸಿಕವಾಗಿ ನರಳಿ ಸತ್ತರು. ಮಗನು ತಾಯಿಯ, ತಂದೆಯ ಶ್ರಾದ್ಧವನ್ನು ಅದ್ದೂರಿಯಿಂದ ಮಾಡಿದ. ಬಗೆಬಗೆಯ ಭಕ್ಷ್ಯಗಳನ್ನು ಮಾಡಿಸಿ ಅವರ ಸಮಾಧಿ ಬಳಿ ಒಯ್ದು ಎಡೆ ಹಿಡಿದು ಬಂದರು.

ಹೃದಯ ಹೀನತೆಯಿಂದ, ಜೀವಂತವಿದ್ದಾಗ ತಿರಸ್ಕಾರದಿಂದ ನಡೆಸಿಕೊಂಡು ಸತ್ತ ನಂತರ ಅದ್ದೂರಿಯಿಂದ ಶ್ರಾದ್ಧ ಮಾಡಿದರೆ ಏನು ಬಂದಿತು? ತಾವು ಮಕ್ಕಳಿದ್ದಾಗ ತಾಯಿ ತಂದೆ ಎಷ್ಟು ಕಷ್ಟಪಟ್ಟು ಸಾಕುತ್ತಾರೆ, ದೊಡ್ಡವರನ್ನು ಮಾಡುತ್ತಾರೆ. ಅವರು ಮುಪ್ಪಾದಾಗ ಮಕ್ಕಳಂತೆ ಆಗುತ್ತಾರೆ. ಆಗ ನಿಸ್ಸಹಾಯಕರಾದ ಅವರನ್ನು ಸಂರಕ್ಷಿಸಬೇಕಾದುದು ಮಕ್ಕಳ ಕರ್ತವ್ಯವಲ್ಲವೆ? ನಾನು ಸನ್ಯಾಸ ತಗೋಬೇಕು ಎನ್ನುವಾಗ (ಸನ್ಯಾಸಿಯಾಗುತ್ತೇನೆ ಎನ್ನುವ ಎಲ್ಲರಿಗೂ) ಒಂದು ಪ್ರಶ್ನೆ ಕೇಳುತ್ತಿದ್ದರು. "ಮುಪ್ಪಿನಲ್ಲಿ ಯಾರು ಆಗುತ್ತಾರೆ? ನಾನು ನನ್ನದು ಎನ್ನುವ ಸಂಸಾರ ಬೇಕು." ಈಗಿನ ಕಾಲದಲ್ಲಿ ಈ ಪ್ರಶ್ನೆಯೇ ಅಸಂಬದ್ಧ ಎನಿಸುತ್ತದೆ. ಸನ್ಯಾಸಿಗೆ ಸಮಾಜವಿರುತ್ತದೆ, ಭಕ್ತ ಸಮೂಹವಿರುತ್ತದೆ. ಸಂಸಾರಿಕರಿಗೆ ವೃದ್ಧಾಶ್ರಮಗಳೇ ಆಶ್ರಯ ಸ್ಥಾನಗಳಾಗುವ ಅನಿವಾರ್ಯತೆ ಬರುತ್ತಿದೆ.

ಒಬ್ಬ ಪ್ರಜ್ಞಾವಂತ ಮುದುಕರಿದ್ದರು. ಮಗ -ಸೊಸೆ ಅವರನ್ನು ಸರಿಯಾಗಿ ಮಾತನಾಡಿಸದೆ ತಮ್ಮ ಲೋಕದಲ್ಲೇ ಇರುತ್ತಿದ್ದರು. ಒಂದು ದಿವಸ ಇದ್ದಕ್ಕಿದ್ದಂತೆಯೇ ಮಗನನ್ನು ಕೇಳಿದರು, ನಾನು ಇಂದೇ ಸತ್ತರೆ ಏನು ಮಾಡುತ್ತೀಯಾ? "ನಿಮಗೆ ಒಂದು ಉತ್ತಮ ಸಮಾಧಿ ಕಟ್ಟಿಸಿ ಅದಕ್ಕೆ ಅಮೃತಶಿಲೆ ಹಾಕಿಸುತ್ತೇನೆ. ಬ್ಯಾಂಡಿನ ಮೂಲಕ ಶವಯಾತ್ರೆ ಮಾಡಿಸುತ್ತೇನೆ. ಭಜನೆ ಮಾಡಿಸುತ್ತೇನೆ. ಅದ್ದೂರಿಯಾಗಿ ಶ್ರಾದ್ಧ ಮಾಡುತ್ತೇನೆ. ನೀವು ನನ್ನ ಪ್ರೀತಿಯ ತಂದೆಯಲ್ಲವೆ ?" ಮಗ ಹೇಳಿದ.

"ನಿಜ, ಆದರೆ ಈ ಎಲ್ಲ ವೈಭವ ನೋಡಲು ನಾನೇ ಇರುವುದಿಲ್ಲ. ನಾನು ಸತ್ತ ನಂತರ ಇದನ್ನೆಲ್ಲ ಮಾಡುವ ಬದಲು, ಅಷ್ಟು ಹಣ ಅಪವ್ಯಯ ಮಾಡುವ ಬದಲು ಇರುವಾಗ ಒಂದು ಪ್ರೀತಿಯ ಮಾತನ್ನಾಡಬಾರದೆ?"ಎಂದು ಕೇಳಿದರು. ಹೊರಗಿನ ಜನರನ್ನು ಮೆಚ್ಚಿಸಿ ಹೊಗಳಿಸಿ ಕೊಳ್ಳುವ ಬದಲು ಇರುವವರೆಗೆ ತಾಯಿ ತಂದೆ, ಅಜ್ಜಿ ಅಜ್ಜರನ್ನು ಪ್ರೀತಿಯಿಂದ ಕಂಡು ಸೇವೆ ಮಾಡುವುದೇ ಪರಮ ಧರ್ಮ, ನಿಜ ಕರ್ತವ್ಯ.

3. ಹೆಣ್ಣು ಮೈಯೆಲ್ಲ ಕಣ್ಣಾಗಿರಬೇಕು.

ಪತ್ರಿಕೆಗಳಲ್ಲೆಲ್ಲ ಪ್ರಿಯಾಂಕಳದ್ದೆ ಸುದ್ದಿ. ಆಕೆಯ ಪರವಾಗಿ ಅನೇಕ ಸಂಘಟನೆಗಳಿಂದ ಪ್ರತಿಭಟನೆ, ಚಳುವಳಿ. ಆನಂದ ಎಂಬಾತ ಪ್ರೀತಿಸಿ, ವಂಚಿಸಿ, ದೈಹಿಕ ಸಂಪರ್ಕವನ್ನೂ ಬೆಳೆಸಿ ನಂತರ ಕೈಕೊಟ್ಟು ತಿರುಮಲಾ ಎಂಬಾಕೆಯನ್ನು ಮದುವೆಯಾದ. ಮದುವೆ ನಡೆಯುತ್ತಲೇ ಪ್ರಿಯಾಂಕ ಬಂದು ಪ್ರತಿಭಟನೆ ಮಾಡಿದಳು. ಅಷ್ಟು ಹೊತ್ತಿಗೆ ಆನಂದ ತಿರುಮಲಾಳಿಗೆ ತಾಳಿ ಕಟ್ಟಿ ಆಗಿತ್ತು. ಪ್ರಿಯಾಂಕಳಿಗೆ ನ್ಯಾಯ ಸಿಗಬೇಕು, ಆನಂದನಿಗೆ ಶಿಕ್ಷೆಯಾಗಬೇಕು ಎಂದು ಪ್ರಿಯಾಂಕ ಮತ್ತು ಪ್ರತಿಭಟನಾಕಾರರ ಆಗ್ರಹ. ಸಕಾಲದಲ್ಲಿ ಕ್ರಮ ತೆಗೆದುಕೊಳ್ಳದ ಪೋಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕೆಂದು ಅವರ ಇನ್ನೊಂದು ಬೇಡಿಕೆ. ಇಂದಿನ (ದಿ.18-11-09) ಪತ್ರಿಕೆಗಳಲ್ಲಿ ಇಂತಹ ಮೂರು ಸುದ್ದಿ ;ಆಗದಿರುವುದು ಇನ್ನೆಷ್ಟೋ. ಉಳಿದೆರಡರಲ್ಲಿ ಓರ್ವ ಮಹಿಳೆ ತಾನು ಒಬ್ಬ ವ್ಯಕ್ತಿಯಿಂದ ಮೋಸ ಹೋದುದಾಗಿಯೂ, ಆಕೆಗೆ ಮೂರು ತಿಂಗಳ ಹೆಣ್ಣು ಮಗು

ಇರುವುದಾಗಿಯೂ ಹೇಳಿಕೊಂಡಿದ್ದಾಳೆ. ಮತ್ತೊಬ್ಬಾಕೆ ಸಾಫ್ಟ್‌ವೇರ್ ಎಂಜಿನಿಯರ್. ಆಕೆಯನ್ನು ಲಾಡ್ಜಿಂಗ್‌ಗೆ ಕರೆದುಕೊಂಡು ಹೋಗಿ ಕೇರಳ ಮೂಲದ ಇನ್ನೊಬ್ಬ ಎಂಜಿನಿಯರ್ ಸ್ನೇಹಿತ ಅತ್ಯಾಚಾರವೆಸಗಿದ್ದಾಗಿ ಪೋಲೀಸರಿಗೆ ದೂರು ನೀಡಿದ್ದಾಳೆ. ಈ ಎಲ್ಲಾ ಸನ್ನಿವೇಶಗಳನ್ನು ನೋಡಿದಾಗ ಹೆಣ್ಣು ಮಕ್ಕಳು ಮಾನಸಿಕವಾಗಿ ಎಷ್ಟು ದುರ್ಬಲರು ಎಂದು ಆಶ್ಚರ್ಯವಾಗುತ್ತದೆ. ಇತ್ತೀಚಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಓರ್ವ ಸರಣಿ ಕೊಲೆಗಾರ 19ಜನ ಮಹಿಳೆಯರನ್ನು ಕೊಂದಿರುವ ಕಥೆ ವರದಿಯಾಗಿತ್ತು ಅವನು ಈಗ ಬಂಧನದಲ್ಲಿದ್ದಾನೆ.

ಗಂಡಸರು ಮನ ಒಲಿಸಿದ ಮಾತ್ರಕ್ಕೆ ಸುಲಭವಾಗಿ ಬುಟ್ಟಿಗೆ ಬೀಳುವ ಹೆಣ್ಣುಮಕ್ಕಳು. ತಮ್ಮಭವಿಷ್ಯದ ಬಗ್ಗೆ ಚಿಂತೆ ಮಾಡಬಾರದೆ? ತಾಯಿ ತಂದೆ ಗಂಡು ನೋಡಿ ಮದುವೆ ಮಾಡುವವರೆಗೆ ಕಾಯುವ ತಾಳ್ಮೆ ಇಲ್ಲದೆ ಕಾಲುಜಾರುವರಲ್ಲ, ಇದು ಎಷ್ಟರ ಮಟ್ಟಿಗೆ ಸರಿ. ಪೋಲೀಸರಿಗೆ ದೂರು ಕೊಟ್ಟ ಸಾಫ್ಟ್‌ವೇರ್ ಇಂಜಿನಿಯರ್ ಮುಗ್ಧಳಲ್ಲ, ತನ್ನ ಸ್ನೇಹಿತನ ಒಟ್ಟಿಗೆ ಲಾಡ್ಜಿಂಗ್‌ಗೆ ಸ್ವಯಂ ಪ್ರೇರಣೆಯಿಂದ ತಾನೇ ಹೋದುದು? ತಪ್ಪು ಘಟಿಸಿದಾಗ ಇಬ್ಬರ ಪಾತ್ರವೂ ಇರುವುದಾದರೂ ಕಷ್ಟಕ್ಕೆ ಒಳಗಾಗುವವಳು ಹೆಣ್ಣು. ವೈಯಕ್ತಿಕ ಕಷ್ಟ, ಸಾಮಾಜಿಕ ಅವಹೇಳನಕ್ಕೆ ತಾನೂ ಗುರಿಯಾಗ ಬೇಕಾಗುವುದಲ್ಲದೆ ಆಕೆಯ ಮಗುವೂ ಜೀವನ ಪರ್ಯಂತರ ಅವಮಾನಿತವಾಗಬೇಕಾಗುತ್ತದೆ. ಉದಾಹರಣೆಗೆ ಕರ್ಣ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ತಾಯಿಯ ಹೆಸರನ್ನು ಮಕ್ಕಳ ಹೆಸರಿನ ಜೊತೆ ಬರೆಯುವ ಪರಿಪಾಠವಿದೆ. ತಂದೆಯ ಹೆಸರು ಗೊತ್ತಿಲ್ಲದಾಗ ಹಾಗೆ ಮಾಡುವರು. ನಮ್ಮ ದೇಶದಲ್ಲಿ ಹಾಗೆ ಬರೆದಾಗ ವೇಶ್ಯೆಯ ಮಕ್ಕಳೆಂದು ಅವರು ಸಾಮಾಜಿಕ ಅವಹೇಳನಕ್ಕೆ ಒಳಗಾಗುವರು. ಅಲ್ಪಕಾಲೀನ ದೈಹಿಕ ಸುಖಕ್ಕೆ ಮರುಳಾದ ಇಂಥ ದುರ್ಬಲ ಮನದ ಮಹಿಳೆಯರು ತಮ್ಮ ಸಂತಾನವನ್ನೂ ಎಂಥಾ ಅತಂತ್ರ ಮನಸ್ಥಿತಿಗೆ, ಅನಾಥ ಪ್ರಜ್ಞೆಗೆ ದೂಡುವರು ಎಂಬ ಅರಿವಿಲ್ಲದ ಅಜ್ಞಾನಿಗಳು.

ಆ ಪ್ರಿಯಾಂಕ ಎಂಬಾಕೆ ಲಕ್ಷಾಂತರ ರೂ ಡೊನೇಷನ್ ತೆತ್ತು ಎಂ.ಬಿ.ಎ. ಕೋರ್ಸಿಗೆ ಸೇರಿದ್ದಳಂತೆ. ಏಕಾಗ್ರ ಚಿತ್ತ ದೃಢ ಮನಸ್ಸಿನಿಂದ ವಿದ್ಯಾಭ್ಯಾಸದಲ್ಲಿ ನಿರತವಾಗದೆ ಪ್ರಣಯ ಚೇಷ್ಟೆಯಲ್ಲಿ ತೊಡಗಿ ಎಂಥಾ ವಿಪತ್ತಿಗೆ ಒಳಗಾದಳು. ಇಂದಿನ ಚಲನಚಿತ್ರಗಳು, ಕೆಲವು ಟಿವಿ ಚಾನೆಲ್‌ಗಳು ಅತ್ಯಂತ ಕೀಳು ಮಟ್ಟದ ಅಭಿರುಚಿ, ಆಸಕ್ತಿ ಜೀವನದ ದೃಷ್ಟಿಕೋನವನ್ನು ಬೆಳೆಸುತ್ತವೆ. ಇವುಗಳ ಮಧ್ಯೆ ತನ್ನನ್ನು ತಾನು ರಕ್ಷಿಸಿಕೊಂಡು ಗುರಿಯ ಕಡೆಗೆ ಸಾಗುವುದು ಯುವ ಜನಾಂಗಕ್ಕೆ ಕಷ್ಟಸಾಧ್ಯ. ಹೆಣ್ಣುಮಕ್ಕಳು ಮೈಯೆಲ್ಲ ಕಣ್ಣಾಗಿ ತಮ್ಮನ್ನು ತಾವು ಕಾಯ್ದುಕೊಳ್ಳುವುದಕ್ಕೆ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ತಮ್ಮ ದೌರ್ಬಲ್ಯಕ್ಕಾಗಿ ಇತರರನ್ನು ದೂರುವುದರಲ್ಲಿ ಅರ್ಥವಿಲ್ಲ.

4. ನನ್ನಿಂದ ನನ್ನಿಂದ, ನಿನ್ನಿಂದ ನಿನ್ನಿಂದ

ಸಾಮಾನ್ಯವಾಗಿ ಮನುಷ್ಯರ ಮಧ್ಯದ ಸಂಬಂಧಗಳು ಎಷ್ಟೋ ಬಾರಿ ಹಳಸಿಬಿಟ್ಟು ವಿರಸ ಉಂಟಾಗುವುದುಂಟು. ಗಳಸ್ಯ ಕಂಠಸ್ಯ ಇದ್ದವರು ಪರಸ್ಪರ ಮನಸ್ಸು ಒಡೆಸಿಕೊಳ್ಳುವುದುಂಟು. ಪ್ರೀತಿಸಿ, ಕಷ್ಟನಷ್ಟ ವಿರೋಧಗಳನ್ನು ಎದುರಿಸಿ ಮದುವೆಯಾದವರ ಮಧ್ಯದ ಸಂಬಂಧವು ಕೂಡ ಸಡಿಲವಾಗುವುದನ್ನು ಕಂಡಾಗ ಅಚ್ಚರಿ ಎನಿಸುತ್ತದೆ. ಈ ಬಿರುಕಿಗೆ ಕಾರಣಗಳನ್ನು ಹುಡುಕುತ್ತ ಹೋದಾಗ ಪ್ರಮುಖ ಕಾರಣ ಅಹಂ, ಹಮ್ಮು ಎನಿಸುತ್ತದೆ. ಭಾರತೀಯ ಸಮಾಜವು ಒಂದು ವ್ಯವಸ್ಥೆಗೆ ಬದ್ಧವಾಗಿದೆ. ಈ ವ್ಯವಸ್ಥೆಯ ಚೌಕಟ್ಟು ಬಿಟ್ಟು ಅತ್ತಿತ್ತ ಯಾರಾದರೂ ಕದಲಿದರೆ ಸಂಪ್ರದಾಯಬದ್ಧ ಸಮಾಜವು ಉಲ್ಲಂಘಿಸಿದವರನ್ನು ವಿಲಕ್ಷಣವಾಗಿ ನೋಡುತ್ತದೆ. ಜಾತಿ ವ್ಯವಸ್ಥೆಯನ್ನು ಮೀರಿ ಅಂತರ್‌ಜಾತೀಯ ವಿವಾಹವಾದಾಗ, ಮಾತ್ರವಲ್ಲ ಒಂದೇ ಜಾತಿಯವರೇ ಇರಲಿ ಪ್ರೇಮಿಸಿ ವಿವಾಹವಾಗಿ ವರದಕ್ಷಿಣೆ ಮುಂತಾದವಕ್ಕೆ ಸಂಚಕಾರ ತಂದುಕೊಂಡಾಗ ಹುಡುಗನ ತಾಯಿತಂದೆ ಮುಂತಾದವರು ದೂರವಾಗುವುದುಂಟು. ಅನ್ಯ ಜಾತಿಯವನೊಡನೆ ವಿವಾಹವಾದಾಗ ಹುಡುಗಿಯ ಮಾತಾಪಿತೃಗಳು, ಅಣ್ಣತಮ್ಮಂದಿರು ಬಂಧು ಬಾಂಧವರು ದೂರಸರಿಯುವುದುಂಟು. ಅಂಥ ಸನ್ನಿವೇಶದಲ್ಲಿ ಹೆರಿಗೆ ಮುಂತಾದ ಸಂದರ್ಭದಲ್ಲಿ ತೌರಿನವರ ಆಸರೆ, ಅಕ್ಕರೆ ಇಲ್ಲದಾಗ, ಗಂಡನು

ಸುಪ್ತಪ್ರಜ್ಞೆಯಲ್ಲಿಯೇ ಇಟ್ಟಿದ್ದರೂ ಹೆಂಡತಿಯಲ್ಲಿ ಖಿನ್ನತೆ (Mental depression) ಇದು ತಪ್ಪು ತನ್ನ ಪ್ರೇಮವು ಬಹಳಷ್ಟು ತ್ಯಾಗವನ್ನು ನಿರೀಕ್ಷಿಸುತ್ತದೆ ಎಂಬ ಅರಿವು ಆಕೆಯಲ್ಲಿರಬೇಕೇ ವಿನಾ ಖಿನ್ನತೆಗೆ ಬಲಿಯಾಗಬಾರದು. ಅಲ್ಲಿಂದ ಮುಂದೆ ಖಿನ್ನತೆ ಬೆಳೆಯುತ್ತ ಹೋಗುವುದು. ಸಾಮಾನ್ಯವಾಗಿ ಪ್ರೇಮ ವಿವಾಹದವರು ವಿದ್ಯೆ, ಬುದ್ಧಿ, ಚಿಂತನೆ, ದುಡಿಮೆ - ಎಲ್ಲದರಲ್ಲೂ ಸಮಾನವಾಗಿ ಇರುತ್ತಾರೆ. ಆದ್ದರಿಂದ ನಾನೇನು ಕಡಿಮೆ ಎಂಬ ಹಮ್ಮು ಇಬ್ಬರಲ್ಲೂ ಕಾಡುತ್ತಿರುತ್ತದೆ. ಹೀಗಾಗಿ ಸಂಘರ್ಷವು ಶುರುವಾಗುತ್ತದೆ. "ನಿನಗಾಗಿ ನಾನು ತ್ಯಾಗ ಮಾಡಿದೆ; ಬಂಧುಬಾಂಧವರನ್ನೆಲ್ಲ ಕಳೆದುಕೊಂಡೆ." ಎಂದು ಪರಸ್ಪರ ಕಾದಾಡ ತೊಡಗುವರು. ಇದರ ಬದಲು "ನನಗಾಗಿ ನೀನು ಎಂಥಾ ತ್ಯಾಗ ಮಾಡಿದೆ. ನಿಮ್ಮ ತಾಯಿ ತಂದೆ ಬಂಧು ಬಾಂಧವರನ್ನು ಕಳೆದುಕೊಂಡೆ." ಎಂದು ಪರಸ್ಪರ ಅಂದುಕೊಂಡರೆ ಜಗಳವೇ ಬರುವುದಿಲ್ಲ, ಬದಲಿಗೆ ವಿಶ್ವಾಸವು ವೃದ್ಧಿಯಾಗುತ್ತದೆ.

ಅದೇ ರೀತಿ ಏನಾದರೂ ಸಾಧನೆ ಮಾಡಿದಾಗ, ನಾನು ಇಂಥಾ ಕೆಲಸ ಮಾಡಿದೆ, ಇನ್ನಾರೂ ಸಹಕರಿಸಲಿಲ್ಲ, ಎಂಬುದರ ಬದಲಿಗೆ ನಾನು ಏನೂ ಮಾಡಿಲ್ಲ; ಎಲ್ಲವನ್ನು ಇವರೇ ಮಾಡಿದ್ದಾರೆ. ಎಂದು ಹೇಳುತ್ತಾ ಹೋದರೆ ಜೊತೆಗಿರುವವರು ಇನ್ನೂ ಹುಮ್ಮಸ್ಸಿನಿಂದ ದುಡಿಯುತ್ತಾರೆ. ಆದ್ದರಿಂದ ನನ್ನಿಂದ ನನ್ನಿಂದ, ನಿನ್ನಿಂದ ನಿನ್ನಿಂದ ಎಂಬ ಪದಗಳನ್ನು ಯಾವ ರೀತಿ ಬಳಸುತ್ತೇವೆ ಎಂಬುದರ ಮೇಲೆ ಜೀವನದ ಸಾಮರಸ್ಯ, ಯಶಸ್ಸು ನಿಂತಿರುತ್ತದೆ ಎನ್ನಬಹುದು.

5. ತಂದೆಯ ಪ್ರೀತಿಯೇ ಮುಖ್ಯ

ಒಂದು ಅವಿಭಕ್ತ ಕುಟುಂಬವಿತ್ತು, ತಂದೆ ಬಹುದೊಡ್ಡ ಜಮೀನುದಾರ, ಅವನಿಗೆ ನಾಲ್ಕು ಮಕ್ಕಳು, ಅವರ ಪತ್ನಿಯರು - ಮಕ್ಕಳು, ಆಳು ಕಾಳು ಎಲ್ಲ ಸೇರಿ ದೊಡ್ಡದಾದ ಕುಟುಂಬವಾಗಿತ್ತು. ಎಲ್ಲ ರೀತಿಯ ಸುಖಸಂಪತ್ತು ಅಲ್ಲಿ ತುಂಬಿ ತುಳುಕುತ್ತಿತ್ತು. ಮನೆಯ ಯಜಮಾನಿತಿ ಅಂದರೆ ತಾಯಿ ತೀರಿಕೊಂಡಳು. ಮಕ್ಕಳು ವೃದ್ಧ ತಂದೆಯನ್ನು ಅನಾದರಿಸಲು ತೊಡಗಿದರು. ತಂದೆ ಕೊಟ್ಟ ಸಂಪತ್ತನ್ನು ಅನುಭವಿಸ ತೊಡಗಿದರಾದರೂ ಆ ಹಿರಿಯ ಜೀವವನ್ನು ನಿರ್ಲಕ್ಷಿಸತೊಡಗಿದರು. ಆದರೆ ಆ ಮನೆಯಲ್ಲಿ ಬಹುಕಾಲದಿಂದಿದ್ದ ಒಬ್ಬ ಸೇವಕ ಮಾತ್ರ ವೃದ್ಧ ಯಜಮಾನನನ್ನು ಆದರದಿಂದ ನೋಡಿಕೊಳ್ಳುತ್ತ ಸೇವೆ ಮಾಡುತ್ತಲಿದ್ದನು. ಅಪಾರವಾದ ಆಸ್ತಿಯ ಬಗ್ಗೆ ಸರಿಯಾಗಿ ಪಾಲು ಮಾಡಿಕೊಡಬೇಕೆಂದು ಮಕ್ಕಳು ತಂದೆಯನ್ನು ಪೀಡಿಸುತ್ತಿದ್ದರೂ ಆ ವೃದ್ಧ ಮಾತ್ರ ಕೇಳಿಯೂ ಕೇಳದಂತೆ ಉದಾಸೀನ ಮಾಡುತ್ತಿದ್ದ.

ಒಂದು ದಿವಸ ವೃದ್ಧ ಯಜಮಾನ ತೀರಿಕೊಂಡ. ಅವನು ಉಯಿಲನ್ನು ಬರೆದಿರಲಿಲ್ಲ. ಮಕ್ಕಳು ಪಾಲು ಮಾಡಿಕೊಂಡು ಬೇರೆಯಾಗಬೇಕೆಂದು ಹಪಾಹಪಿ ಮಾಡತೊಡಗಿದಾಗ ವೃದ್ಧ ಯಜಮಾನನ ಮಿತ್ರರಾಗಿದ್ದ ಕೆಲವರು ಪಾಲು ಮಾಡಲು ಕುಳಿತರು. ನಾಲ್ಕೂ ಮಕ್ಕಳಿಗೆ ಹೊಲ, ಮನೆ, ಬಂಗಾರ, ಆಭರಣ, ನಗದು ಎಲ್ಲವನ್ನೂ ಸಮನಾಗಿ ಹಂಚಿದರು. ತೀರಿಕೊಂಡ ಯಜಮಾನನ ಆಳೆತ್ತರದ ಒಂದು ಭಾವಚಿತ್ರವಿತ್ತು. ಅದು ಸುಂದರವಾದ ತೈಲಚಿತ್ರ. ಅದನ್ನು ಯಾರಿಗೆ ಕೊಡಬೇಕು ಎಂದಾಗ ಯಾರೂ ತೆಗೆದುಕೊಳ್ಳಲು ಸಿದ್ಧರಾಗಲಿಲ್ಲ "ಅಷ್ಟು ದೊಡ್ಡದು ನಮಗೆ ಬೇಡ" ಎಂದು ಎಲ್ಲರೂ ನುಡಿಯತೊಡಗಿದರು. ಯಜಮಾನ ಜೀವಂತವಿರುವವರೆಗೂ ನಿಷ್ಠೆಯಿಂದ ಸೇವೆ ಮಾಡಿದ ಸೇವಕ ಯಜಮಾನನ ಮಕ್ಕಳ ವರ್ತನೆ ನೋಡಿ ಜಿಗುಪ್ಸೆಗೊಂಡ. ಅವನು ಎದ್ದು ನಿಂತು ಹೇಳಿದ, "ಯಜಮಾನರ ತೈಲಚಿತ್ರ ನನಗಿರಲಿ ಕೊಡಿರಿ. ನನ್ನ ಮನೆಯಲ್ಲಿಟ್ಟು ಪೂಜಿಸುತ್ತೇನೆ." ಅವನದು ಸಣ್ಣಮನೆ. ಈ ಚಿತ್ರಕ್ಕೆ ಬೆಲೆ ಕೊಟ್ಟು ಕೊಳ್ಳಬೇಕು ಎಂದು ಪಂಚಾಯಿತಿ ಮಾಡುವವರು ಹೇಳಿದಾಗ ಅದಕ್ಕೂ ಒಪ್ಪಿಕೊಂಡ. ತೈಲ ಚಿತ್ರ ಇಳಿಸಿಕೊಳ್ಳುವಾಗ ಅದರ ಹಿಂದೆ ಇಡಲ್ಪಟ್ಟಿದ್ದ ಪತ್ರವೊಂದು ಬಿದ್ದಿತು. ಎಲ್ಲರೂ ಕುತೂಹಲದಿಂದ ಬಿಚ್ಚಿ ಓದಿದರು. "ನನ್ನ ಭಾವಚಿತ್ರ ಬೇಕೆಂದು ಯಾರು ಇಷ್ಟಪಡುವರೋ ಅವರಿಗೆ ನನ್ನ ಸಮಸ್ತ ಆಸ್ತಿ ಹೋಗಬೇಕು. ಉಳಿದವರಿಗೆ ಯಾವ ಅಧಿಕಾರವೂ ಇಲ್ಲ." ಶ್ರೀಮಂತನ ಸಮಸ್ತ ಆಸ್ತಿಗೆ ಆ ಸೇವಕ ಒಡೆಯನಾದ. ಅಹಂಕಾರಿಗಳೂ, ಸ್ವಾರ್ಥಿಗಳೂ ಆದ ಮಕ್ಕಳು ಏನೂ ಇಲ್ಲದಂತಾದರು.

ದೇವರ ಕುರಿತಾದ ಭಕ್ತಿಯೂ ಹೀಗೆ ಇರುತ್ತದೆ. ಯಾರು ಪರಮಾತ್ಮನ ಒಲುಮೆ ಬೇಕೆಂದು ಉಳಿದೆಲ್ಲವನ್ನು ತ್ಯಜಿಸುತ್ತಾರೋ ಅವರಿಗೆ ದೇವರೊಲಿಮೆಯು ಸಿಗುವುದರ ಜೊತೆಗೆ ಇನ್ನಿತರ ಸಂಪತ್ತಾದ ಧನ, ಕೀರ್ತಿ ಎಲ್ಲವೂ ಲಭ್ಯವಾಗುತ್ತವೆ.

ಬಸವ ವಚನಾಮೃತ

316. ಪ್ರಚಾರ ಪ್ರಿಯ ಭಕ್ತಿ

ನಿಮ್ಮ ಭಕ್ತಿಯಲ್ಲಿ ಧರಧುರನೆಂಬೆ;
ದಿಟಕ್ಕೆ ಬಂದಡೆ ಕಾಣದಂತೆ ಅಡ್ಡಮುಖವನಿಕ್ಕುವೆ -
ಗರುಡಂಗೆ ಘಟಸರ್ಪನ ತೋರುವಂತೆ !
ಶಿವಶರಣೆಂದಡೆ ಕಿವಿ ಕೇಳದಂತಿಹೆನು:
ಮನಕ್ಕೆ ಮನವೇ ಸಾಕ್ಷಿಯಯ್ಯಾ, ಲಿಂಗದೇವಾ. -ಬ.ವ.ದೀ.314

"ಧರಧುರ" ಎಂದರೆ ಪರಿಣಿತ ಎನಿಸಿಕೊಳ್ಳುವುದು. ಭಕ್ತಿ ಮಾರ್ಗದಲ್ಲಿ ಪ್ರವೀಣ ಎಂಬ ಪ್ರಚಾರ ಬೇಕು, ಬಿರಿದು ಬೇಕು. ಆದರೆ ಪರೀಕ್ಷೆಗೆ ಒಡ್ಡಲ್ಪಟ್ಟಾಗ ಈತನ ನಿಜ ಭಕ್ತಿಯ ಪೊಳ್ಳುತನ ಬಯಲಾಗುತ್ತದೆ. ಸತ್ವ ಪರೀಕ್ಷೆ ಎದುರಾದಾಗ ಮುಖ ಮರೆಸಿಕೊಳ್ಳುವನು. ಜಂಗಮರು ದಾಸೋಹಕ್ಕಾಗಿ ಅಥವಾ ಸಮಾಜದ ಕೆಲಸ ಕಾರ್ಯಗಳಿಗಾಗಿ ದೇಣಿಗೆ ಕೇಳಲು ಬಂದರೆ ಅವರಿಗೆ ಕಾಣದಂತೆ ಅಡ್ಡ ಮುಖವನ್ನು ಮಾಡುವನು. ಇಲ್ಲವೇ ಮುಖ ಸಿಂಡರಿಸಿಕೊಂಡು ಸಿಡುಕುವನು. ಆಕಾಶದಲ್ಲಿ ಹಾರಾಡುವ ಗರುಡಪಕ್ಷಿಯು ಒಂದು ಘಟ ಸರ್ಪವನ್ನು ನೋಡಿದರೆ ಪ್ರಚೋದನೆಗೊಂಡು ಸರ್ಪವನ್ನು ಕುಕ್ಕುವಂತೆ, ಕೊಕ್ಕಿನಲ್ಲಿ ಕಚ್ಚಿಕೊಳ್ಳಲು ಎರಗುವಂತೆ ಜಂಗಮರ ಮೇಲೆ ಎರಗುವನು. ಅವರು ಬಂದು ಶಿವ ಶರಣು, ಶರಣು ಶರಣಾರ್ಥಿ ಎಂದು ಮಾತನಾಡಿಸಿದರೂ ಕಿವಿಯು ಕೇಳಿಸಲಿಲ್ಲವೇನೋ ಎಂಬಂತೆ ಈ ಧುರಂಧರನು ನಟಿಸುವನು. ಇಂಥ ಸಂದರ್ಭದಲ್ಲಿ ಈ ಆಡಂಬರದ ಪ್ರಚಾರ ಪ್ರಿಯ ಭಕ್ತನ ಬೂಟಾಟಿಕೆ ಬಯಲಾಗುವುದು. ಇಂಥವರು ಮನಸ್ಸಿನ ಸಾಕ್ಷಿಯಾಗಿ ನಡೆಯಲು ಕಲಿಯಬೇಕು.

ಇಂದು ಜಂಗಮವು ಒಂದು ಜಾತಿಯಾಗಿ ವಿಕೃತಗೊಂಡಿರಬಹುದು. ಅವರಿಗೆ ಸ್ವಧರ್ಮದ ತರಬೇತಿಯು ಇಲ್ಲದ್ದರಿಂದ ಅಜ್ಞಾನಿಗಳಾಗಿರಬಹುದು ಅಥವಾ ಸ್ವಧರ್ಮ ವಿರೋಧಿ ಆಚರಣೆ ಮಾಡುತ್ತಿರಬಹುದು. ಆದರೆ ಅಂದಿನ ಜಂಗಮರು ಧರ್ಮ ಪ್ರಚಾರ ಕಾಯಕ ಮಾಡುತ್ತಿದ್ದರು. ಅವರ ಯೋಗಕ್ಷೇಮವನ್ನು ನೋಡಿಕೊಳ್ಳದಿದ್ದರೆ ಅವರ ಉಪಜೀವನ ಹೇಗೆ? ಧರ್ಮ ಪ್ರಚಾರದ ಉತ್ಸಾಹವಾದರೂ ಉಳಿಯುತ್ತದೆಯೆ? ಅದಕ್ಕಾಗಿಯೇ ಗುರು ಬಸವಣ್ಣನವರು ಭಕ್ತನು ಸಮಾಜಕ್ಕಾಗಿ ದುಡಿಯುವ ಜಂಗಮನನ್ನು, ಸಂಸ್ಥೆಯನ್ನು ಸಲಹ ಬೇಕು ಎಂದು ಬೋಧೆ ಮಾಡುವರು.

317. ಆದ್ಯರ ವಚನ ಅನುಷ್ಠಾನಗೊಳ್ಳಬೇಕು.

ಆದ್ಯರ ವಚನ ಪರುಷವೆಂಬರು;
ಆ ಪರುಷವೆನಗೆಂತು ದೊರಕೊಂಬುದಯ್ಯಾ ?
ತನು ಮನ ಧನವ ನಿವೇದಿಸಿ ನುಡಿವೆ;
ಸೋಂಕಿಂಗೆ ಸೈರಿಸಲಾರೆ.ಹೊಲೆಯರ ಮದ್ದಳೆಯಂತೆ ನುಡಿವ ಡಂಬಕ ನಾನಯ್ಯ
ಲಿಂಗದೇವಾ
- ಬ.ವ.ದೀ.299

ಆದಿ ಶರಣರ ವಚನ ಪರುಷದಂತೆ, ಸ್ಪರ್ಶಿಸಿದವರನ್ನು ಪರಿವರ್ತಿಸುವುದು. ಆದರೆ ಹಾಗೆ ಸ್ಪರ್ಶಿಸಲ್ಪಡುವ ವಸ್ತು ಕಬ್ಬಿಣದಂತಹ ಲೋಹವಾಗಿರಬೇಕೇ ವಿನಾ ಮಣ್ಣಿನ ಹೆಂಟೆಯಾದರೆ ಆಗದು. ಬಾಯಿ ಮಾತಿನಲ್ಲಿ ತನು ಮನ ಧನವೆಂಬ ತ್ರಿವಿಧ ಸಂಪತ್ತು ದೇವನದು, ಶರಣರದು ಎಂದೆಲ್ಲ ಬೊಗಳೆ ಬಿಡಬಹುದು. ಆದರೆ ಸೋಂಕಿಗೆ ಸೈರಿಸುವುದು ಕಷ್ಟ. ತನುವು ದುಡಿಯಬೇಕಾಗಿ ಬಂದಾಗ, ಮನವು ಶರಣರೊಡನೆ ವ್ಯವಹರಿಸುವಾಗ, ಧನವನ್ನು ಸಮಾಜಕ್ಕೆ ಸಲ್ಲಿಸಬೇಕಾದ ಅನಿವಾರ್ಯತೆ ಒದಗಿದಾಗ ವ್ಯಕ್ತಿ ಸಿಡಿದು ಬೀಳುವನು. ಆದ್ಯರ ವಚನಕ್ಕೆ ಅರ್ಥವಂತಿಕೆ, ಜೀವಂತಿಕೆ ಬರುವುದು ಅವು ಆಚರಣೆಗೆ ಬಂದಾಗ ತಾನೆ? ಕೆಲವೊಂದು ಸನ್ನಿವೇಶದಲ್ಲಿ (ಉದಾ: ಶವವನ್ನು ಒಯ್ಯುವಾಗ)ಹೊಲೆಯರನ್ನು ಕರೆಸಿ ಹಲಗೆ ಬಾರಿಸಲು ವ್ಯವಸ್ಥೆ ಮಾಡಲಾಗುವುದು.

ಆ ಬಾರಿಸುವಿಕೆಯಲ್ಲಿ ಶೃತಿಯಾಗಲಿ, ನಾದವಾಗಲಿ, ತಾಳವಾಗಲಿ ಇರುವುದಿಲ್ಲ. ಅದೇ ಮೃದಂಗ, ತಬಲಾ, ನಾದಸ್ವರ, ವೀಣೆ ಮುಂತಾದ ಮಂಗಳವಾದ್ಯದಲ್ಲಿ ಶೃತಿ, ನಾದ, ತಾಳವಿರುತ್ತದೆ. ಹೊಲೆಯರ ಮದ್ದಳೆ ಅಸಂಬದ್ಧವಾಗಿ ಸದ್ದು ಮಾಡುವಂತೆ, ಡಾಂಭಿಕ ಭಕ್ತನ ಮಾತೂ ಸಹ. ಅಲ್ಲಿ ಮಾತಿನ ಸದ್ದು ಮಾತ್ರ ಇರುತ್ತದೆ; ಆಚರಣೆ ಇರುವುದಿಲ್ಲ.

318. ಕಾಂಚನವೊಂದು ಮಾಯೆ

ಕಾಂಚನವೆಂಬ ಮಾಯೆ ನಚ್ಚಿ ನಿಮ್ಮ ನಾನು ಮರೆದೆನಯ್ಯಾ;
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ.
ಹಡಿಕೆಗೆ ಮೆಚ್ಚಿದ ಸೊಣಗ
ಅಮೃತದ ಸವಿಯ ಬಲ್ಲುದೆ ಲಿಂಗದೇವಾ? - ಬ.ವ.ದೀ.316

ಮಾಯೆ ಎಂದರೆ ಆಮಿಷ (Temptation) ಎಂದು ಈ ಸಂದರ್ಭದಲ್ಲಿ ಅರ್ಥ ಮಾಡಬಹುದು. ಮಾಯಾ ಜಾಲವನ್ನು ಬೀಸುವುದರಲ್ಲಿ ಕನಕ, ಕಾಂಚನ, ಕಾಮಿನಿ, ಕೀರ್ತಿ ಇವುಗಳ ಪ್ರತಾಪ ಬಹುದೊಡ್ಡದು. ಇವುಗಳಿಗಾಗಿ ಜಗತ್ತೇ ಹೋರಾಡಿ ಹಣ್ಣಾಗುತ್ತಿದೆ. ಗೃಹಸ್ಥರ ಮಾತು ಅತ್ತಲಿರಲಿ ಸ್ವಾಮಿಗಳು, ಮಠಾಧೀಶರೇ ಇವುಗಳ ಬಲೆಗೆ ಸಿಕ್ಕುವುದನ್ನು ಕಾಣುತ್ತೇವೆ. ಜಗತ್ ಮಿಥ್ಯೆ, ಜೀವನ ಹೇಯ, ಮಾಯೆ ಎಂಬ ಅದ್ವೈತಿಗಳು ಆರೂಢರು ಬಂಗಾರದ ಕಿರೀಟ, ಬೆಳ್ಳಿಯ ಹಾವುಗೆ, ಬಂಗಾರ -ಬೆಳ್ಳಿಯ ಸಿಂಹಾಸನಗಳ ಆಮಿಷಕ್ಕೆ ಬಲಿಯಾಗುವುದನ್ನು ನೋಡುತ್ತೇವೆ. ಹಣ ಎಂಬ ಮಾಯೆಯನ್ನು ನಂಬಿಕೊಂಡ ಗುರು -ಜಂಗಮರು, ಮಠಾಧೀಶರು ಧರ್ಮಪ್ರಚಾರ ಮರೆತು ವಿವಿಧ ಮೂಲಗಳಿಂದ ಕೋಟ್ಯಧಿಪತಿಗಳಾಗಲು ಪೈಪೋಟಿ ನಡೆಸುವುದನ್ನು ಕಾಣುತ್ತೇವೆ. ಅದನ್ನೇ ಧರ್ಮಪಿತರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಹಣ ಎಂಬ ಮಾಯೆಯನ್ನು ನಂಬಿಕೊಂಡು (ಭಕ್ತರನ್ನು ಮರೆಯುವುದು ಒತ್ತಟ್ಟಿಗಿರಲಿ) ದೇವರನ್ನೇ ಮರೆಯುವ ಪರಿಸ್ಥಿತಿ. ಪೂಜೆ ಮಾಡಲು ಸಮಯವಿಲ್ಲ ಎಂದು ವಿವರಣೆ ಬೇರೆ. ಇಲ್ಲಿ ಗುರು ಬಸವಣ್ಣನವರ ಇನ್ನೊಂದು ವಚನವನ್ನು ನೆನಪು ಮಾಡಿಕೊಂಡರೆ ಸೂಕ್ತವೆನಿಸುತ್ತದೆ.

ಉಂಬಾಗಳಿಲ್ಲೆನ್ನ , ಉಡುವಾಗಳಿಲ್ಲೆನ್ನ,
ಬಂಧುಗಳು ಬಂದಾಗಳಿಲ್ಲೆನ್ನ;
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದ ಪುರಾತರಿಗೆ ಇಲ್ಲೆಂಬ
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ,
ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ ಲಿಂಗದೇವಾ?

ಊಟ ಮಾಡಲಿಕ್ಕೆ ಸಮಯವಿಲ್ಲ, ಹಣವಿಲ್ಲ ಎಂದು ಯಾರೂ ಹೇಳುವುದಿಲ್ಲ. ಬಂಧುಗಳು ಹೇಗಾದರೂ ಮಾಡಿ ಹಣವನ್ನು, ಸಮಯವನ್ನು ಉಣ್ಣಲು, ಅಲಂಕರಿಸಿಕೊಳ್ಳಲು, ಬಂಧುಗಳು ಬಂದಾಗ ಅವರನ್ನು ಉಪಚರಿಸಲು ತನ್ನ ವೈಭವವನ್ನು ಅವರ ಮುಂದೆ ತೋರಿಸಿಕೊಳ್ಳಲು, ಒದಗಿಸಿಕೊಳ್ಳುವನು. ಲಿಂಗದೇವನ ಪೂಜೆ ಮಾಡಲಿಕ್ಕೆ ಸಮಯವಿರದು, ಜಂಗಮ ದಾಸೋಹದಲ್ಲಿ ಪಾಲ್ಗೊಳ್ಳಲು ಸಮಯ ಮತ್ತು ಹಣ ಇಲ್ಲ ಎಂದು ಗೋಳಾಡುವನು. ಸ್ವಾರ್ಥಿಯಾಗಿ ಬದುಕಿ ನಂತರ ಅನಾರೋಗ್ಯಕ್ಕೆ ಒಳಗಾಗಿ ಮನಶಾಂತಿ ಕಳಕೊಂಡು ಪ್ರಾಣ ಹೋಗುವಾಗ ಬೇಗನೆ ದೇಗುಲಕ್ಕೆ ಒಯ್ಯಿರಿ, ಅಲ್ಲಿ ನನ್ನ ಪ್ರಾಣ ಹೋಗಲಿ. ಎಂದು ಚಟಪಟಿಸುವನು. ಜೀವನ ಪರ್ಯಂತರ ಉತ್ತಮ ಕೆಲಸಗಳನ್ನು ಮಾಡದೆ ಸಾಯುವಾಗ ದೇವರ ಕೃಪೆ ಬಯಸಿದರೆ ಅದು ಬಿಟ್ಟಿ (ಪುಕ್ಕಟ್ಟೆ) ದೊರೆಯುವುದೆ?

ಕಾಂಚನ ಗಳಿಸಲು ಸಮಯವನ್ನು ಸವೆಸುವ ಅಜ್ಞಾನಿಯು ಮಹಾದಾತನಾದ ಲಿಂಗದೇವನ ಪೂಜೆ, ಪ್ರಾರ್ಥನೆ, ನೆನಹಿಗೆ ಸಮಯವನ್ನು ಒದಗಿಸಿಕೊಳ್ಳುವುದಿಲ್ಲ. ಇವರಿಗೆ ಪೂಜೆಯಲ್ಲಿ ದೊರೆಯುವ ಆನಂದ, ಪುನಶ್ಚೇತನ, ಉಲ್ಲಾಸ- ಇವುಗಳ ರುಚಿ ಏನು ತಿಳಿದಿರುತ್ತದೆ. ಅಮೇಧ್ಯ, ಮೂಳೆ ಮುಂತಾದ ದುರ್ವಾಸನೆಯ ವಸ್ತುಗಳಿಗೆ ಆತುರ ಪಡುವ ನಾಯಿಯು ಅಮೃತದಂತಹ ವಸ್ತುವಿನ ಸ್ವಾದ ಸವಿಯಲು ಸಮರ್ಥವೆ?

319. ಗಂಡನ ಮುನಿಸು ಏಕೆ?

ಒಲಿವ ಗಂಡನೊಮ್ಮೆ ಒಲ್ಲದಿಪ್ಪ ಕಂಡಯ್ಯಾ
ತಪ್ಪೆನ್ನದು ತಪ್ಪೆನ್ನದು!
ತನು ಮನ ಧನದಲ್ಲಿ ಮಾಟಕೂಟವೆಂದರಿಯದ
ತಪ್ಪೆನ್ನದು ತಪ್ಪೆನ್ನದು!
ಕಡೆಯಿಲ್ಲದ ಹುಸಿ ಎನ್ನದು ಲಿಂಗದೇವಾ — ಬ.ವ.ದೀ.317

ಪತಿಯು ಪತ್ನಿಯನ್ನು ಅಪಾರವಾಗಿ ಪ್ರೀತಿಸುವನು. ಒಂದು ವೇಳೆ ಅವನು ಒಮ್ಮೆ ಮುನಿಸಿಕೊಂಡಿದ್ದಾನೆಂದರೆ ಅದರರ್ಥ ಅವಳು ಏನೋ ತಪ್ಪು ಮಾಡಿದ್ದಾಳೆ ಎಂದರ್ಥ. ಹಾಗೆಯೇ ಲಿಂಗಪತಿಯು ಶರಣ ಸತಿಯನ್ನು ಸದಾ ಪ್ರೀತಿಸುವನು. ಆದರೆ ಏಕೋ ನನಗಿನ್ನೂ ದೇವನು ಒಲಿಯುತ್ತಿಲ್ಲ ಎಂದರೆ ಅವನು ನನ್ನ ಮೇಲೆ ಮುನಿದಿರಬಹುದು. ತಪ್ಪು ನನ್ನಲ್ಲಿ ಇರಲೇಬೇಕು. ನಾನು ತನು ಮನ ಧನಗಳನ್ನು ನಿರ್ವಂಚನೆಯಿಂದ ಅರ್ಪಿಸಿಲ್ಲ ಎಂಬುದೇ ಆ ಲಿಂಗದೇವನ ಮುನಿಸಿಗೆ ಕಾರಣವಾಗಿರಬಹುದು. ತನು ಮನ ಧನಗಳನ್ನು ಅರ್ಪಿಸಿ ಮಾಡುವ ಮಾಟಗಳಾದ ಕಾಯಕ ಮತ್ತು ದಾಸೋಹಗಳಲ್ಲಿಯೇ ದೇವನ ಒಲಿಮೆ ಇದೆ ಎಂಬುದು ನನಗೇಕೆ ಮನವರಿಕೆಯಾಗುತ್ತಿಲ್ಲ? ಈ ಹೊಯ್ದಾಟದಿಂದಾಗಿ ನಾನು ನಿರಂತರವಾಗಿ ಹುಸಿ ನಂಬಿಕೆಗಳಿಗೆ ಈಡಾಗುತ್ತಿದ್ದೇನೆ. ಅಜ್ಞಾನಿ ಮಾನವರು ತಮ್ಮಲ್ಲಿ ನೂರಾರು ದೋಷ ದೌರ್ಬಲ್ಯ ತಪ್ಪುಗಳಿದ್ದರೂ ತಾವು ಪರಿಪೂರ್ಣರೆಂದು ಹಮ್ಮು ತಾಳುತ್ತಾರೆ. ಸತ್ಯದ ಸಾಧಕರು ತಮ್ಮದು ನಿಷ್ಕಲಂಕ ವ್ಯಕ್ತಿತ್ವ ಇದ್ದರೂ ತಮ್ಮ ಅಂತರಂಗವನ್ನು ಎಳೆಎಳೆಯಾಗಿ ಹಿಂಜುತ್ತ ತಮ್ಮೊಳಗಣ ಲೋಪದೋಷ (ಇಲ್ಲದಿದ್ದರೂ) ಹುಡುಕುವ ಪ್ರಯತ್ನ ಮಾಡುತ್ತಾರೆ.

320. ಮುಂದುಗಾಣದ ಮತಿಭ್ರಷ್ಟತೆ

ಕಾಣುತ್ತ ಕಾಣುತ್ತ ಕಡೆಗಣಿಸಿ ಅರಸುವ ಮತಿಭ್ರಷ್ಟ ನಾನು ಲಿಂಗಯ್ಯ
ತನುಲೋಭ ಮನಲೋಭ ಧನಲೋಭ
ಮುಂದುಗೆಡಿಸಿ ಕಾಡಿಹವೆನ್ನ.
ತನು ಮನ ಧನವ ನಿವೇದಿಸಿದವರ ಮನೆಯ ಮಗ ನಾನಯ್ಯ
ಲಿಂಗದೇವಾ. — ಬ.ವ.ದೀ.318

ಎದುರಿಗಿರುವುದನ್ನು, ಕೈಗೆ ಎಟುಕಿದುದನ್ನು ಬಿಟ್ಟು ಅಥವಾ ತಿರಸ್ಕರಿಸಿ ಬೇರೊಂದು ಹುಡುಕುವ ಸ್ವಭಾವ ಮನುಷ್ಯನದು. ಸತ್ಯದ ಸಾಧಕರು, ಜ್ಞಾನಿಗಳು ಎದುರಿಗಿದ್ದಾಗ ಅವರ ಸದುಪಯೋಗ ತೆಗೆದುಕೊಳ್ಳುವುದು ಬಿಟ್ಟು, ಕಡೆಗಣಿಸಿ ಇನ್ನೂ ಶ್ರೇಷ್ಠರು ಬೇಕೆಂದು ಹುಡುಕುವ ಪ್ರವೃತ್ತಿಯವರನ್ನು ಮತಿಭ್ರಷ್ಟರೆಂದು ಗುರು ಬಸವಣ್ಣನವರು ಕರೆದಿದ್ದಾರೆ.

ಇದಕ್ಕೆ ಕಾರಣವೆಂದರೆ ತನು ಲೋಭ, ಮನ ಲೋಭ, ಧನ ಲೋಭ. ಕೆಲವರು ಯಾರನ್ನಾದರೂ ಮೆಚ್ಚಿಕೊಂಡರೆ ಅವರ ಸೇವೆಯನ್ನು ಮಾಡಬೇಕಾದೀತೆಂದು ಅಥವಾ ಅವರು ಕೈಗೊಂಡ ಕಾರ್ಯಕ್ಕೆ ತಾನೂ ಬದ್ಧನಾಗಿ ಸಮಯವನ್ನು ಕೊಡಬೇಕಾದೀತೆಂದು ಅವರಲ್ಲಿ ಏನಾದರೊಂದು ದೋಷವನ್ನು ಹುಡುಕುತ್ತ ದೂಷಿಸುವರು. ಒಳ್ಳೆತನ್ನು ಕಂಡು ಹೊಗಳಲಾರದ ಸಣ್ಣತನದಿಂದ ಮನ ಲೋಭವನ್ನು ಪ್ರದರ್ಶಿಸುವರು. ಇಷ್ಟೆಲ್ಲ ಮೆಚ್ಚಿಕೊಳ್ಳುತ್ತೀರಿ. ಅವರಿಗೆ ನೀವು ಯಾವ ರೀತಿ ಸಹಾಯ ಮಾಡಿರುವಿರಿ? ಎಂದು ಯಾರಾದರೂ ಕೇಳಿಯಾರಲ್ಲಾ ಎಂದು ತಾವೇ ಮೊದಲು ನಿಂದೆ ಮಾಡತೊಡಗುವರು. ಮೆಚ್ಚಿಕೊಂಡರೆ ಎಲ್ಲಿ ಧನ ಸಹಾಯ ಮಾಡಬೇಕಾದೀತೋ ಎಂದೂ ಸಹ ದೂಷಿಸುವರು. ಈ ತ್ರಿವಿಧ ಲೋಭಗಳು ಮನುಷ್ಯನ ವಿವೇಕವನ್ನು ಮಂಕುಗೊಳಿಸಿ, ಸರಿಯಾದ ದೃಷ್ಟಿ ಅಳವಡದಂತೆ ಮಾಡುವವು.

ಕಡೆಯದಾಗಿ ಗುರುಬಸವಣ್ಣನವರು ಹೇಳುವರು, ಇನ್ನೊಬ್ಬರನ್ನು ಅಳೆಯುವುದಾಗಲಿ, ವಿಮರ್ಶೆ ಮಾಡುವುದಾಗಲೀ, ದೂಷಣೆ ಮಾಡುವುದಾಗಲೀ ಮಾಡದೆ ತನುವನ್ನಾಗಲಿ,

ಮನವನ್ನಾಗಲಿ, ಧನವನ್ನಾಗಲಿ ಸಮರ್ಪಿಸಿ ದುಡಿಯುವವರ ಮನೆಯ ಮಗನಾಗಿ ನಾನು ಅವರ ಕಾರ್ಯಗಳಲ್ಲಿ ಭಾಗಿಯಾಗುತ್ತೇನೆ. (ಏಕೆಂದರೆ ಎಲ್ಲರ ಪಾಪ ಪುಣ್ಯಗಳಿಗನುಸಾರವಾಗಿ ತೀರ್ಪು ಕೊಡುವವನು ದೇವರು)

321. ದೇವರ ಪರೀಕ್ಷೆ ಬಹು ಕಠಿಣ

ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ?
ಕೋಳದ ಮೇಲೆ ಸಂಕೋಲೆಯನಿಕ್ಕುವರೆ ?
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೆ?
ಲಿಂಗದೇವಯ್ಯ ಕಾಡುವ ಕಾಟ
ಸಿರಿಯಾಳಂಗಲ್ಲದೆ ಸೈರಿಸಬಹುದೆ? — ಬ.ವ.ದೀ.319

ಆಳವಾದ ಹಗಹದಲ್ಲಿ ಜಾರಿ ಬಿದ್ದು ಮೇಲೇಳಲಾರದೆ ತೊಳಲಾಡುತ್ತಿರುವವರ ಮೇಲೆ ಯಾರಾದರೂ ಒರಳು ಕಲ್ಲನ್ನು ನೂಕಿ ಇನ್ನಷ್ಟು ಘಾಸಿಗೊಳಿಸುವರೆ? (ಹಿಂದಿನ ಕಾಲದಲ್ಲಿ ಧಾನ್ಯಗಳನ್ನು ಇಲಿ, ಹುಳು-ಉಪ್ಪಟೆ ತಿನ್ನದಂತೆ ಸಂರಕ್ಷಿಸಲು ಆಳವಾದ ತಗ್ಗುಗಳನ್ನು ಮಾಡಿರುತ್ತಿದ್ದರು. ಅದಕ್ಕೆ ಹಗಹ, ಹಗೇವು ಎಂದು ಕರೆಯುತ್ತಿದ್ದರು) ಕೈಗೆ ಕೋಳ ಹಾಕಿಕೊಂಡಿರುವವನಿಗೆ ಒಂದು ಸರಪಳಿ ಹಾಕಿ ಕಟ್ಟುವರೆ? ಚರ್ಮವು ಸುಟ್ಟು ಅದು ನಂಜಾಗಿ ಹುಣ್ಣಾಗಿರುವಾಗ ಅದನ್ನು ಕಬ್ಬಿಣದ ಸಲಾಕೆಯಿಂದ ಕೀಸುವರೆ? ಈ ಪಾಪಮಯ ಜಗತ್ತಿನಲ್ಲಿ ಭಕ್ತನಾಗುವುದು, ಸತ್ಯ ಮಾರ್ಗದಲ್ಲಿ ನಡೆಯುವುದೇ ಒಂದು ದುಃಸಾಧ್ಯದ ಕೆಲಸವಾಗಿರುವಾಗ ಮಾನವರ ಜೊತೆಗೆ ದೇವರೂ ಕಾಡತೊಡಗಿದರೆ ಇನ್ನೆಂತು?

322. ಶರಣರ ನಿಭಾವಣೆ ಕಷ್ಟಸಾಧ್ಯ

ಸೋಲಬಲ್ಲರು ಅವರು ಗೆಲಲರಿಯರಯ್ಯಾ.
ತನು ಮನ ಧನದಲ್ಲಿ ವಂಚನೆಯನರಿಯರಯ್ಯಾ
ದಾಸ ಸಿರಿಯಾಳನವರು;
ಲಿಂಗದೇವನ ಶರಣರು ಉಪಚಾರವನರಿಯರಯ್ಯಾ — ಬ.ವ.ದಿ. 320

ಪುರಾತನರು ಭಾವೋನ್ಮಾದದ ಭಕ್ತರು. ಅವರು ಭಾವುಕರಾಗಿ ಯಾರೋ ಕೇಳಿದ ಏನನ್ನು ಬೇಕಾದರೂ ಕೊಟ್ಟು, ಕಳೆದುಕೊಳ್ಳುತ್ತಾರೆ. ಉದಾಹರಣೆಗೆ ಸಿರಿಯಾಳ ಯಾರೋ ಶಿವ ವೇಷಧಾರಿ ಜೋಗಿಯು ನರಮಾಂಸವನ್ನು ಕೇಳಿದನೆಂದು ಸಾರಾಸಾರ ವಿಚಾರ ಮಾಡದೆ ಮಗನನ್ನು ಕಡಿದಿಕ್ಕಿ ಅವನನ್ನು ಕಳೆದುಕೊಂಡ (ಶಿವ ಪ್ರತ್ಯಕ್ಷನಾದ; ಮಗನನ್ನು ಬದುಕಿಸಿದ; ತಂದೆ ಸಿರಿಯಾಳ ತಾಯಿ ಚೆಂಗಳೆ, ಮಗ ಚೀಲಾಳನನ್ನು ಬದುಕಿಸಿ ಮೂವರನ್ನೂ ಕೈಲಾಸಕ್ಕೆ ಕರೆದೊಯ್ದ ಎನ್ನುವುದು ಕಟ್ಟುಕಥೆ) ಶಿವಭಕ್ತ ಬೇಡರ ಕಣ್ಣಪ್ಪ ಕಣ್ಣನ್ನು ಕಿತ್ತಿಟ್ಟು ಕುರುಡನಾದ, ಶಿವಭಕ್ತೆ ನಿಂಬೆಕ್ಕ ಮಗನನ್ನು ಜಂಗಮ ಉಣ್ಣುವುದಕ್ಕೆ ಮುನ್ನವೇ ಉಂಡನೆಂದು ತಲೆ ಒಡೆದು ಮಗನ ಸಾವಿಗೆ ಕಾರಣಳಾದಳು. ಇವರವು ಅನುಕರಣೀಯ ಭಕ್ತಿಯಲ್ಲ ಅತಿರೇಕದ ಭಕ್ತಿ. ತನು ಮನ ಧನಗಳನ್ನು ಸಮರ್ಪಣೆ ಮಾಡುವುದರಲ್ಲಿ ಅವರು ವಂಚಕರಲ್ಲ. ಆದರೆ ಇಂಥವರ ಮುಗ್ಧತೆಯನ್ನು ದುರುಪಯೋಗ ಮಾಡಿಕೊಳ್ಳುವ ವೇಷಧಾರಿಗಳು ಮಹಾವಂಚಕರು.

ಲಿಂಗದೇವನ ಶರಣರು ಮಾತ್ರ ವಿಚಾರ ಶೀಲರು, ಸತ್ಪಾತ್ರದಾನಿಗಳು. ಅವರು ಲೋಕೋಪಚಾರವನರಿಯರು, ದಾಕ್ಷಿಣ್ಯಕ್ಕೆ ಒಳಗಾಗರು. ಎಲ್ಲವನ್ನು ಕೂಲಂಕಷವಾಗಿ ವಿಚಾರಿಸಿ ದಾನ (ದಾಸೋಹ) ಮಾಡುವರು.

323. ಭಕ್ತನಾಗುವುದು ಕಠಿಣ

ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ
ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಲು ಬಾರದು.
ಅರ್ಥಪ್ರಾಣಾಭಿಮಾನವಾರಿಗೆಯೂ ಸಮನಿಸದು,
ಲಿಂಗಮುಖವಲ್ಲದಯವಾದ ಶರಣಂಗಲ್ಲದೆ ಅಯ್ಯಾ

ಲಿಂಗದೇವನ ಶರಣರ ಭಕ್ತಿ ಭಂಡಾರವು
ಎನಗಂತು ಸಾಧ್ಯವಪ್ಪುದು ಹೇಳೆನ್ನ ತಂದೆ? - ಬ.ವ.ದೀ.321

ಮಾತನಾಡುವುದರಲ್ಲಿ ಇನ್ನೊಬ್ಬರ ಕಿವಿಗೆ ಹಿತವೆನಿಸುವ ಮಾತುಗಳನ್ನು ಆಡಬಹುದೇ ವಿನಾ ಮಾಡುವ ಆಚರಣೆಯಲ್ಲಿ ಭಕ್ತನೆನಿಸಿಕೊಳ್ಳುವುದು ಕಷ್ಟಸಾಧ್ಯ. ಏಕೆಂದರೆ ಭಕ್ತನು ಅರ್ಥದಲ್ಲಿ, ಪ್ರಾಣದಲ್ಲಿ, ಅಭಿಮಾನದಲ್ಲಿ ಏಕೋ ನಿಷ್ಠೆಯಿಂದ ಕೂಡಿರಬೇಕಾಗುತ್ತದೆ. ಅರ್ಥದಲ್ಲಿ - ಹಣ ಗಳಿಕೆಯ ಮಾರ್ಗದಲ್ಲಿ ಸತ್ಯವೂ ಶುದ್ಧವೂ ಆಗಿರಬೇಕು. ಗಳಿಸಿದ ಅರ್ಥವನ್ನು ವಿನಿಯೋಗಿಸುವುದರಲ್ಲಿ ಸಹ ತಾತ್ವಿಕ ಶುದ್ಧಿ ಕಾಯ್ದುಕೊಳ್ಳಬೇಕು. ಪ್ರಾಣದಲ್ಲಿ ಸರ್ವಾರ್ಪಣೆ ಇರಬೇಕು. ಜೀವ ಭಯ, ಮರಣಕ್ಕೆ ಅಂಜುವಿಕೆ ಶರಣನ ಲಕ್ಷಣವಲ್ಲ. ಒಂದು ತತ್ವಕ್ಕಾಗಿ ಪ್ರಾಣಾರ್ಪಣೆ ಮಾಡಬೇಕಾಗಿ ಬಂದಾಗ ಹಿಂಜರಿಯಬಾರದು. ಅದೇ ರೀತಿ ಅಭಿಮಾನದಲ್ಲಿ -ಹೆಣ್ಣಿಗಾಗಿ, ಮಣ್ಣಿಗಾಗಿ, ಹೊನ್ನಿಗಾಗಿ ತನ್ನ ಧರ್ಮಾಭಿಮಾನ ತೊರೆಯಬಾರದು. ಕ್ರೈಸ್ತರು, ಮುಸಲೀಮರು ಗಂಡಸರೇ ಇರಲಿ, ಹೆಂಗಸರೇ ಇರಲಿ ಇತರ ಮತದವರನ್ನು ಪ್ರೇಮಿಸಿ ವಿವಾಹವಾಗುವ ಸಂದರ್ಭ ಬಂದಾಗ ತಾವು ತಮ್ಮ ಧರ್ಮವನ್ನು ಬಿಡುವುದಿಲ್ಲ. ಆ ನಿಷ್ಠೆ ಉಳಿದ ಹಿಂದುಗಳಲ್ಲಿ, ಲಿಂಗಾಯತರಲ್ಲಿ ಕಾಣಬರುವುದಿಲ್ಲ. ಸುಲಭವಾಗಿ ಹೆಣ್ಣಿಗಾಗಿಯೋ, ಗಂಡಿಗಾಗಿಯೋ ತಮ್ಮ ಧರ್ಮವನ್ನು ಬಿಟ್ಟು ಬಿಡುವರು. ವಿವಾಹ ಸಂಬಂಧವನ್ನು ಜೋಡಿಸುವಾಗಲೂ ಅಷ್ಟೆ ತತ್ವ ನಿಷ್ಠೆಯ ಸಂಬಂಧ ನೋಡದೆ ತಾಯಿತಂದೆ ಕೇವಲ ವಿದ್ಯಾರ್ಹತೆ, ಸಂಪಾದನೆ, ಶ್ರೀಮಂತಿಕೆ ಮಾತ್ರ ನೋಡುವರು. ಅರ್ಥ ಪ್ರಾಣ ಅಭಿಮಾನಗಳಲ್ಲಿ ದೃಢತೆಯು ನಿಜವಾದ ಲಿಂಗದೇವನ ಭಕ್ತರಿಗಲ್ಲದೆ ಅನ್ಯರಿಗೆ ಸಾಧ್ಯವಾಗದು. ಶರಣರ ಈ ನಿಷ್ಠೆ ಎಲ್ಲ ಅನುಯಾಯಿಗಳಲ್ಲಿ ಅಳವಡುವುದು ಎಂದು? ಹೀಗೆ ತಮ್ಮ ಮೇಲೆ ಹಾಕಿಕೊಂಡು ಧರ್ಮಪಿತರು ಅನುಯಾಯಿಗಳಲ್ಲಿ ನಿಷ್ಠೆಯನ್ನು ನಿರೀಕ್ಷಿಸುವರು.

324. ದೇವನೊಬ್ಬ ವ್ಯವಹಾರಿಕ

ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ?
ಸಿರಿಯಾಳನಂತೆ ಉಣಲಿಕ್ಕಬಲ್ಲೆನೆ ?
ದಾಸಿಮಯ್ಯನಂತೆ ಉಡಕೊಡಬಲ್ಲೆನೆ ?
ಉಂಡು ಉಟ್ಟು ಕೊಟ್ಟಡೆ ಮುಯ್ಯಿಗೆ ಮುಯ್ಯೆನಿಸಿತ್ತು;
ಎನಗೆ ಕೊಟ್ಟಡೆ ಧರ್ಮ, ಕೂಡಲ ಸಂಗಮದೇವಾ. - ಬ.ವ.ದೀ.322

ಬಾಣ ಮತ್ತು ಮಯೂರರಿಬ್ಬರೂ ಕಂಧಾರದ ನಂದರಾಜನ ಆಸ್ಥಾನದಲ್ಲಿದ್ದ ಕವಿಗಳು. ಒಮ್ಮೆ ರಾಜನು ಇವರಿಬ್ಬರನ್ನೂ ಜಲವಿಹಾರಕ್ಕೆ ಆಹ್ವಾನಿಸಿದನು. ಮಯೂರನಿಗೆ ಕುಷ್ಟ ರೋಗವಿತ್ತು. ಆಗ ಬಾಣನು ಹೇಳಿದ, ಮಯೂರನಿಗೆ ಕುಷ್ಟರೋಗ ಮತ್ತು ಅಶಕ್ತತೆ ಇದೆ. ಅವನು ಬರಲಾರ. ಇದರಿಂದ ನೊಂದುಕೊಂಡ ಮಯೂರನು ಸೂರ್ಯನನ್ನು ಪ್ರಾರ್ಥಿಸಿದಾಗ ಅವನ ಶರೀರ ಮಿರಿಮಿರಿ ಮಿಂಚುವಂತೆ ಆಯಿತು. ಮತ್ತೊಮ್ಮೆ ಜಲವಿಹಾರಕ್ಕೆ ಹೋಗುವಾಗ ರಾಜನು ಇಬ್ಬರನ್ನೂ ಆಹ್ವಾನಿಸಿದಾಗ ಮಯೂರನೂ ಹೋದ. ಮಯೂರನನ್ನು ನೋಡಿ ಚಕಿತನಾದ. ರಾಜ ಬಾಣನನ್ನು ಕುರಿತು, ಇವನಿಗೆ ಕುಷ್ಟರೋಗವಿದೆ ಎಂದೆ. ಅದೇನೂ ಕಾಣುತ್ತಿಲ್ಲವಲ್ಲ. ಎಂದು ಕೇಳಿದ. ಇದೆ, ಸೂರ್ಯನ ಪ್ರಭಾವದಿಂದ ಅದು ಮರೆಯಾಗಿದೆ ಅಷ್ಟೆ ಎಂದ. ನಿಜ, ಅಷ್ಟನ್ನಾದರೂ ಅವನು ಸಾಧಿಸಿದ್ದಾನೆ. ಅದೇನು ಸಾಮಾನ್ಯವೇ? ಎಂದು ಕೇಳಿದಾಗ ತನ್ನ ಅಪ್ರತಿಮ ಸಾಧನೆಯನ್ನು ತೋರಿಸಲೋಸುಗ ಬಾಣನು ತನ್ನ ಎರಡೂ ಕೈಗಳನ್ನು ಕಡಿದುಕೊಂಡು ಭಕ್ತಿಯಿಂದ ಶಿವನನ್ನು ಕಾವ್ಯಮಯ -ವಾಗಿ ಸ್ತುತಿಸಲು ಆರಂಭಿಸಿದ. ಕಡಿದ ಕೈಗಳೆರಡೂ ಮತ್ತೆ ಬಂದವು.

ಹೀಗೆ ಬಾಣ ಮತ್ತು ಮಯೂರರು ತಮ್ಮ ಭಕ್ತಿಪೂರ್ಣ ಗಾಯನದಿಂದ ವರವನ್ನು ಪಡೆದರು. ನಾನು ಹಾಗೆ ನಿನ್ನನ್ನು ಒಲಿಸಬಲ್ಲೆನೆ ? ಸಿರಿಯಾಳ ಮಗನನ್ನೇ ಕಡಿದಿಟ್ಟು ಪಡೆದರು. ನಾನು ಹಾಗೆ ನಿನ್ನನ್ನು ಒಲಿಸಬಲ್ಲನೆ? ಸಿರಿಯಾಳ ಮಗನನ್ನೇ ಕಡಿದಿಟ್ಟು ಅಡಿಗೆ ಮಾಡಿ ನೀಡುವ ಧೈರ್ಯ ತೋರಿದ. ಆ ರೀತಿ ನಾನು ಉಣಲಿಡಬಲ್ಲೇನೇ? ದೇವರ ದಾಸಿಮಯ್ಯನಾದರೋ ಅತ್ಯಂತ ಬೆಲೆಬಾಳುವ ರೇಷ್ಮೆಯ ಪಿತಾಂಬರವನ್ನು ಯಾವುದೂ ಹಿಂಜರಿಕೆಯಿಲ್ಲದೆ ಕೊಟ್ಟು ವರವಾಗಿ

ವಿಶೇಷ ಸಂಪತ್ತನ್ನು ಪಡೆದ. ಇದರಂತೆ ಕೊಡಲು ನನ್ನಲ್ಲಿ ಏನೂ ಇಲ್ಲ. ಬಾಣ ಮಯೂರರಂತೆ ಬಣ್ಣಿಸಲು ಕಾವ್ಯ ಸಂಪತ್ತಿಲ್ಲ, ಸಿರಿಯಾಳನಂತಹ ಧೈರ್ಯವಿಲ್ಲ, ದೇವರ ದಾಸಿಮಯ್ಯನಂತಹ ಔದಾರ್ಯವಿಲ್ಲ. ಅದರಲ್ಲಿ, ನಿನ್ನ ದೊಡ್ಡಸ್ತಿಕೆ ಏನಿದೆ ? ಉಂಡು ಉಟ್ಟು ವರವನ್ನು ಕೊಟ್ಟರೆ ಅದು ಮುಯ್ಯಿಗೆ ಮುಯ್ಯಿ ಎನಿಸಿಕೊಳ್ಳುವುದು. ನನ್ನ ಬಳಿ ಇದೇನೂ ಇಲ್ಲ. ನನಗೆ ನೀನು ದರ್ಶನ, ಅನುಗ್ರಹ ಕೊಟ್ಟರೆ ನಿನ್ನನ್ನು ಧರ್ಮಿ, ಕರುಣಾಳು ಎನ್ನಬಹುದು. ಇಲ್ಲದಿದ್ದರೆ ನಿನ್ನದು ಕೊಡು ಕೊಳ್ಳುವ ವ್ಯವಹಾರ ಮಾತ್ರ. (ಈ ವಚನಗಳೆಲ್ಲವೂ ಸಾಕ್ಷಾತ್ಕಾರಕ್ಕೆ ಮೊದಲು ಮುಗ್ಧ ಭಕ್ತಿಯಿಂದ ಬರೆಯಲ್ಪಟ್ಟವು. ಶಿವ ಸಂಬಂಧಿಯಾದ ಇಂಥ ವಚನಗಳಲ್ಲಿ ಕೂಡಲ ಸಂಗಮದೇವಾ ಮುದ್ರಿಕೆಯನ್ನು ಉಳಿಸಿಕೊಳ್ಳಲಾಗಿದೆ.)

325. ಬಡವಂಗೆ ಕರುಣಿಸುವುದು ಹಿರಿಮೆ

ದಾಸಿದೇವ ತನ್ನ ವಸ್ತ್ರವಿತ್ತು, ತವನಿಧಿಯ ಪ್ರಸಾದವ ಪಡೆದ.
ಸಿರಿಯಾಳ ತನ್ನ ಮಗನನಿತ್ತು ಪ್ರಾಣ ಪ್ರಸಾದವ ಪಡೆದ.
ಬಲ್ಲಾಳದೇವ ತನ್ನ ವಧುವನಿತ್ತು ಸಮತಾಪ್ರಸಾದವ ಪಡೆದ.
ಇವರೆಲ್ಲರು ತಮತಮಗೆ ಮಾಡಿ ಹಡೆದರು ಸಮ್ಯಕ್ ಪದವಿಯನು.
ನಾನೇನನೂ ಅರಿಯದ ಭಕ್ತಿಯ ಬಡವಂಗೆ ಕರುಣಿಸು
ಕೂಡಲಸಂಗಮದೇವಾ. - ಬ.ವ.ದೀ.323

ದೇವರ ದಾಸಿಮಯ್ಯ ರೇಷ್ಮೆಯ ವಸ್ತ್ರವನ್ನು ದಾನ ಮಾಡಿ, ಅಪಾರವಾದ ಸಂಪತ್ತನ್ನು ಪ್ರತಿಫಲವಾಗಿ ಪಡೆದ; ಸಿರಿಯಾಳನು ತನ್ನ ಮಗನನ್ನೇ ಕಡಿದು ಅಡುಗೆ ಮಾಡಿಟ್ಟು ಪುನಃ ಮಗನ ಪ್ರಾಣವನ್ನು ಪ್ರಸಾದವಾಗಿ ಪಡೆದ. ಸಿಂಧು ಬಲ್ಲಾಳ ತನ್ನ ಹೆಂಡತಿಯನ್ನೇ ಓರ್ವ ಜೋಗಿಗಿತ್ತು ಚಿತ್ತ ಸಮತೆಯನ್ನು ಮೆರೆದ. ಇವರೆಲ್ಲರು ತಮ್ಮಲ್ಲಿನ ವಸ್ತುಗಳನ್ನು ದಾನ ಮಾಡಿ ಸಮ್ಯಕ್ ಪದವಿಯನು ಪಡೆದರು. ಒಂದೋ, ನನ್ನಲ್ಲಿ ಕೊಡಲು ಏನೂ ಇಲ್ಲ, ಜೊತೆಗೆ ಭಕ್ತಿಯಲ್ಲಿ ಬಡವನು. ಆದ್ದರಿಂದ ನನಗೆ ನೀನು ಅನುಗ್ರಹಿಸುವುದು ನಿನ್ನ ಹಿರಿಮೆಗೆ ಸಾಕ್ಷಿಯಾಗುತ್ತದೆ.

ವಿ.ಸೂ: ವಚನಾಭ್ಯಾಸಿಗಳಿಗೆ ಅನುಕೂಲವಾಗಲೆಂದು 108 ವಚನಗಳ ವ್ಯಾಖ್ಯಾನ ಪೂರೈಸುತ್ತಲೇ ಭಾಗ -1, ಭಾಗ -2 ಪ್ರಕಟಿಸಲಾಗಿದೆ. ಶರಣ ಮೇಳದಲ್ಲಿ ಭಾಗ -3, 217 ರಿಂದ 325ರ ವರೆಗಿನ ವಚನಗಳಿಗೆ ಬರೆದ ವ್ಯಾಖ್ಯಾನ ಪ್ರಕಟಿಸಲಾಗುವುದು. ಮಧ್ಯೆ ಕಲ್ಯಾಣ ಕಿರಣದ ಕೆಲವು ಸಂಚಿಕೆ ಅತ್ತ ಇತ್ತ ಆಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮೂರು ಭಾಗಗಳನ್ನು ಖರೀದಿಸಿ ಇಟ್ಟುಕೊಂಡರೆ ಅಧ್ಯಯನಕ್ಕೆ ಅನುಕೂಲವಾಗುತ್ತದೆ.

ಕಲ್ಯಾಣ ಕಿರಣ ಲಿಖಿತ ಪರೀಕ್ಷೆ

ದಿನಾಂಕ 13.01.2010 ರಂದು ಕಲ್ಯಾಣ ಕಿರಣ ಲಿಖಿತ ಪರೀಕ್ಷೆಯನ್ನು ಶ್ರೀ ಸಿದ್ಧರಾಮೇಶ್ವರ ಶರಣ ಧಾಮದಲ್ಲಿ 2-00 ಗಂಟೆಯಿಂದ 3ರ ವರೆಗೆ ನಡೆಸಲಾಗುವುದು. ಕಲ್ಯಾಣ ಕಿರಣ ಮಾಸ ಪತ್ರಿಕೆ ಕೌಂಟರ್‌ನಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಪಡೆದ 8ರಿಂದ 10 ಪರೀಕ್ಷಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಗುವುದು. ಪರೀಕ್ಷೆಯು ಬಹು ಆಯ್ಕೆ ಪ್ರಶ್ನೆಗಳು, ಒಂದೇ ಶಬ್ದದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು ಮತ್ತು ವಚನಗಳಿಗೆ ಸಂಕ್ಷಿಪ್ತ ಅರ್ಥ ಬರೆಯುವುದನ್ನು ಒಳಗೊಂಡಿರುತ್ತದೆ. ಒಟ್ಟು 60 ಪಶ್ನೆಗಳನ್ನು ಕೊಡಲಾಗುವುದು.

ಶರಣು ಶರಣಾರ್ಥಿಗಳೊಡನೆ

ಬೆಂಗಳೂರು ರಾಷ್ಟ್ರೀಯ ಬಸವ ದಳ ಹಾಗೂ ಗಣಾಚಾರ ದಳದ ವತಿಯಿಂದ
ಹೊಸ ವರ್ಷದ ಹಾರ್ದಿಕ ಶುಭಾಶಯಗಳು -2010

☹ ಸಮಸ್ಯೆ ? - ಸಮಾಧಾನ ! ☺

☐ ....

? ಕಲ್ಯಾಣ ಕಿರಣದ ಅಕ್ಟೋಬರ್ ಸಂಚಿಕೆಯಲ್ಲಿ ಒಂದು ಚಿತ್ರ ಪ್ರಕಟವಾಗಿತ್ತು. ಪರುಷ ಕಟ್ಟೆಯ ಮೇಲಿರುವ ನಂದಿಗೆ ಪೂಜ್ಯ ಗಂಗಾಮಾತಾಜಿ ಇನ್ನಿತರರು ಪೂಜೆ ಸಲ್ಲಿಸುವುದು ಕಾಣಬರುತ್ತದೆ. ಇದು ತಪ್ಪಲ್ಲವೆ?

★ ಪರುಷ ಕಟ್ಟೆ ಒಂದು ಮಹತ್ವದ ಸ್ಥಳ. ಗುರು ಬಸವಣ್ಣನವರು ಅಲ್ಲಿ ಗುರುವಾಗಿ ಕುಳಿತು ಭಕ್ತರ ಇಷ್ಟಾರ್ಥಗಳನ್ನು, ಪ್ರಧಾನಿಯಾಗಿ ಕುಳಿತು ಪ್ರಜೆಗಳ ಬೇಡಿಕೆಗಳನ್ನು ಪೂರೈಸುತ್ತಿದ್ದ ಐತಿಹಾಸಿಕ ಸ್ಥಳ. ಏನು ಮಾಡುವುದು ಅಜ್ಞಾನಿ ಜನರು ಕಲ್ಯಾಣದ ಬಸವಣ್ಣನ ಗುಡಿಗಳಿದ್ದಲ್ಲೆಲ್ಲ ನಂದಿಯನ್ನು ಕೂರಿಸಿದ್ದಾರೆ. ನಮ್ಮ ಜಂಗಮ ಮೂರ್ತಿಗಳು ಅಲ್ಲಿಗೆ ಗುರು ಬಸವಣ್ಣನವರ ಫೋಟೋ ಒಯ್ದು, ಇಟ್ಟು ಪೂಜಿಸಿ ಅಲ್ಲಿರುವ ದೀಪದಿಂದ ಜ್ಯೋತಿಯನ್ನು ಹಚ್ಚಿಕೊಂಡು ಬರುವರು. ಆ ಜ್ಯೋತಿಯಿಂದ ಪೀಠಾರೋಹಣ ಕಾರ್ಯಕ್ರಮವನ್ನು ಉದ್ಘಾಟಿಸಲಾಗುವುದು.

☐ ಶರಣ.ಚಂದ್ರಪ್ಪ, ಕೋಲಾರ

? ನಮಗೆ ಬಂದು ಭಾಗವಹಿಸಬೇಕೆಂಬ ಆಸೆ ಇರುತ್ತದೆ. ಆದರೆ ಚೆನ್ನೈ ಸಮ್ಮೇಳನದ್ದಾಗಲಿ, ಕಲ್ಯಾಣ ಪರ್ವದ್ದಾಗಲಿ ಆಹ್ವಾನವೇ ಬರಲಿಲ್ಲ. ನೊಂದುಕೊಂಡು, ಬರಬೇಕೆಂದು ಕೊಂಡವರು ಬಿಟ್ಟೆವು.

★ ಸಂಸ್ಥೆಗೆ ಸಹಸ್ರಾರು ಭಕ್ತರು, ದೇಣಿಗೆ ಕೊಟ್ಟವರು ಇರುತ್ತಾರೆ. ಇವರಿಗೆಲ್ಲ ವೈಯಕ್ತಿಕ ಆಹ್ವಾನ ಕಳಿಸುವುದು ನಮಗೆ ಸಾಧ್ಯವೇ ಇಲ್ಲ. ಕಲ್ಯಾಣ ಕಿರಣದ ಮೂಲಕ ವಿಷಯ ತಿಳಿಸುತ್ತೇವೆ. ಅದನ್ನೇ ಆಹ್ವಾನ ಎಂದು ತಿಳಿದುಕೊಂಡು ಬರಬೇಕು. ನಾವು ಹಮ್ಮಿಕೊಳ್ಳುವವೆಲ್ಲವೂ ಇಡೀ ಸಮೂಹದ ಕಾರ್ಯಕ್ರಮ. ಆಹ್ವಾನಕ್ಕಾಗಿ ಕಾಯಬಾರದು.

☐ ನೊಂದ ಅನುಯಾಯಿ, ಗುಲಬರ್ಗಾ

? ಶರಣ ಮೇಳ ಆರಂಭವಾದ ವರ್ಷದಿಂದಲೂ ದೇಣಿಗೆ ಸಂಗ್ರಹಕ್ಕೆ ರಸೀತಿ ಪುಸ್ತಕ ಬರುತ್ತಿದ್ದವು. ಮಾಡಿ ತರುತ್ತಿದ್ದೆ, ಕಳೆದ ವರ್ಷದಿಂದ ಬಂದಿಲ್ಲ. ಯಾಕೋ ಕಳಿಸಿಲ್ಲ. ನಾವು ಮಾಡಿಕೊಡುವುದು ಇಷ್ಟವಿಲ್ಲವೇನೋ ಎಂದು ನೊಂದುಕೊಂಡು ಸುಮ್ಮನಾದೆ. ಹೀಗೇಕೆ ಮಾಡಿದಿರಿ?

★ ಶರಣ ಮೇಳ ನಾವಷ್ಟೆ ಅಲ್ಲ ನೀವೆಲ್ಲರೂ ಕೂಡಿ ನಡೆಸಬೇಕಾದ ಕಾರ್ಯಕ್ರಮ. ವೈಯಕ್ತಿಕವಾಗಿ ನಮಗೆ ಗಮನ ಕೊಡಲು ಆಗದು. ಕಾರ್ಯಾಲಯದಲ್ಲಿ ಸಿಬ್ಬಂದಿ ಯಾಂತ್ರಿಕವಾಗಿ ರಸೀತಿ ಪುಸ್ತಕ ಕಳಿಸುತ್ತಿರುತ್ತಾರೆ. ಕೆಲವೊಮ್ಮೆ ಸರಿಯಾಗಿ ವಿಳಾಸ ಬರೆಯದೆ ಕಳಿಸಲ್ಪಟ್ಟವು ವಾಪಸ್ಸು ಬರುತ್ತವೆ. ದೇಣಿಗೆ ಸಂಗ್ರಹ ಮಾಡಿಕೊಡುವ ನಿಷ್ಠಾವಂತರಿಗೆ ಬೇಡ ಎನ್ನುವ ಮೂರ್ಖರು ಇರುತ್ತಾರೆಯೇ? ಕಳಕಳಿ ಇರುವಂಥ ನಿಮ್ಮಂತಹವರು ಒಂದು ವಿಶಿಷ್ಟ ದಿನಾಂಕದವರೆಗೆ ಕಾದು ನೋಡಿ, ಬರದೆ ಇದ್ದರೆ ಫೋನ್ ಮಾಡಿ ಅಥವಾ ಪತ್ರ ಬರೆದು ರಸೀತಿ ಪುಸ್ತಕ ತರಿಸಿಕೊಂಡು ದೇಣಿಗೆ ಸಂಗ್ರಹಿಸಬೇಕು.

☐ ಶೋಭಾ, ಊರು ಬೇಡ

? ನಿಮ್ಮ ಅನುಯಾಯಿಗಳಾದ ನಾವು ನಮ್ಮ ಮಕ್ಕಳಿಗೆ ಲಿಂಗದೇವ ವಚನ ಮುದ್ರಿಕೆಯೊಡನೆ ಬಸವಣ್ಣನವರ ವಚನಗಳನ್ನು ಕಂಠಪಾಠ ಮಾಡಿಸಿದ್ದೇವೆ. ವಚನ ಸ್ಪರ್ಧೆ ಮುಂತಾಗಿ ನಡೆದಾಗ ನಮ್ಮ ಮಕ್ಕಳು ಲಿಂಗದೇವ ಹೇಳಿದರೆ ಬಹುಮಾನ ಸಿಗದು. ಹೀಗಾಗಿ ಧರ್ಮ ಸಂಕಟಕ್ಕೆ ಒಳಗಾಗಿದ್ದೇವೆ.

★ ಸ್ಪರ್ಧೆಯಲ್ಲಿ ಬಹುಮಾನವಾಗಿ ಸಿಗುವ ಸ್ಟೀಲ್ ಲೋಟ, ಸೋಪಿನ ಬಾಕ್ಸ್, ಹಣ ಇವು ಬಹು ಮುಖ್ಯ ಎಂದಾದರೆ ಮನೆಯಲ್ಲಿ ವಚನ ಪಠಣ ಮಾಡುವಾಗ ಲಿಂಗದೇವ ಎಂದು ಹೇಳುವ, ಸ್ಪರ್ಧೆಗಳಲ್ಲಿ, ಪರೀಕ್ಷೆಯಲ್ಲಿ ಬರೆಯುವಾಗ ಹಳೆಯ ವಚನ ಮುದ್ರಿಕೆ ಬಳಸುವ ಚಾಕಚಕ್ಯತೆ ಕಲಿಸಿರಿ. ನಮಗೆ ಸ್ಪರ್ಧೆಯಲ್ಲಿ ಸಿಗುವ ಬಹುಮಾನ ಮುಖ್ಯವಲ್ಲ. ಏಕದೇವೋಪಾಸನೆ ಮುಖ್ಯ ಎಂದಾದರೆ ಲಿಂಗದೇವ ಒಂದನ್ನೇ ಕಲಿಸಿರಿ. ತತ್ವನಿಷ್ಠೆ ತ್ಯಾಗವನ್ನು ನಿರೀಕ್ಷಿಸುತ್ತದೆ.

ಶರಣ ಮೇಳ ದಾಸೋಹಕ್ಕಾಗಿ ದೇಣಿಗೆ ನೀಡಿಕೆ ಮತ್ತು ಸಂಗ್ರಹ

- ಮಾತಾಜಿ

ಕೂಡಲ ಸಂಗಮದಲ್ಲಿ ಜನವರಿ 11ರಿಂದ 15ರವರೆಗೆ ನಡೆಯುವ ಶರಣ ಮೇಳವು ಅನ್ನ ದಾಸೋಹ, ಜ್ಞಾನ ದಾಸೋಹ ಎರಡಕ್ಕೂ ಪ್ರಸಿದ್ಧ. ಯಾರು ಎಷ್ಟು ಹೊತ್ತಿಗೇ ಬರಲಿ ಹಗಲೂ ರಾತ್ರಿ ಪ್ರಸಾದ ಲಭ್ಯ. ದಾನಿಗಳು ಕೊಡುವ ಒಂದೊಂದು ರೂಪಾಯಿ ಸಹ ಎಲ್ಲೂ ಅಪವ್ಯಯ ವಾಗದೆ ಸಾರ್ಥಕವಾಗಿ ವಿನಿಯೋಗವಾಗುವುದು. ಕಣ್ಣು ಕುಕ್ಕುವ ವೈಭವದ ಪೆಂಡಾಲ್ ಆಕರ್ಷಣೆಯಲ್ಲ ಅದರ ಒಳಗೆ ನಡೆಯುವ ಪೂಜೆ - ಪ್ರಾರ್ಥನೆ - ಚಿಂತನೆಗಳು ವಿಶೇಷ ಆಕರ್ಷಣೆ.

ಕೂಡಲ ಸಂಗಮವು ಧರ್ಮಕ್ಷೇತ್ರ; ಇಲ್ಲಿ ನಡೆಯುವ ಶರಣ ಮೇಳ ವಿಶೇಷವಾದ ಧಾರ್ಮಿಕ ಕಾರ್ಯಕ್ರಮ. ಧರ್ಮಕ್ಷೇತ್ರದಲ್ಲಿ ನಡೆಯುವ ದಾಸೋಹ ಕಾರ್ಯಕ್ಕೆ ಕಾಣಿಕೆ ಸಲ್ಲಿಸುವುದು ಪುಣ್ಯ ವಿಶೇಷ. ಅದು ಧರ್ಮಾನುಯಾಯಿಯ ಕರ್ತವ್ಯವೂ ಕೂಡ. ಆದ್ದರಿಂದ ಪ್ರತಿಯೊಬ್ಬ ಧರ್ಮಾನುಯಾಯಿಯಾದ ಲಿಂಗಾಯತ, ಅಭಿಮಾನಿಯಾದ ಬಸವಾಯತನು ತನ್ನ ಕರ್ತವ್ಯವೆಂದು ಹಣವನ್ನು ಶರಣ ಮೇಳಕ್ಕೆಂದು ಎತ್ತಿಡಬೇಕು.

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹೊಯ್ಯುವರೆ ?

ಆರ್ಥಿಕವಾಗಿ ಬಲಹೀನರು ಅಷ್ಟಷ್ಟೆ ಹಣವನ್ನು ಒಂದು ಹುಂಡಿಯಲ್ಲಿ ಹಾಕಿ ಇಡಬೇಕು. ವರ್ಷಕ್ಕೊಮ್ಮೆ ಮನಿಯಾರ್ಡರ್, ಡಿಡಿ ಮೂಲಕ ಇಲ್ಲವೇ ಸಂಗ್ರಹಿಸಲು ಬರುವ ಶರಣರಿದ್ದರೆ ಅವರ ಕೈಲಿ ಕೊಡಬೇಕು. ಬ್ಯಾಂಕಿನ ಅಕೌಂಟ್ ಸಂಖ್ಯೆ ಸಹ ಕೊಡಲಾಗಿದೆ. ಅದಕ್ಕೆ ನೇರವಾಗಿ ಕಳಿಸಬಹುದು. ಕಳಿಸಿ, ಫೋನ್ ಮಾಡಿ ತಿಳಿಸಬೇಕು. ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸುವವರು ಧರ್ಮದ ಬಗ್ಗೆ ಕಳಕಳಿಯುಳ್ಳ ನಿಷ್ಠಾವಂತ ಶರಣರು. ಅವರ ಕೈಗೆ ಕೊಟ್ಟು ರಸೀತಿ ಪಡೆಯಬೇಕು. ಆಸಕ್ತಿ ಇರುವ ಶರಣ ಬಂಧುಗಳು ಪತ್ರ ಬರೆದು, ಫೋನ್ ಮಾಡಿ ರಸೀತಿ ತರಿಸಿಕೊಳ್ಳಬಹುದು.

ಶರಣ ಮೇಳವು ಶರಣರಿಂದ ಶರಣರಿಗಾಗಿ ಶರಣರು ನಡೆಸುವ ಸಮಾವೇಶ ಇಲ್ಲಿ ದೇಣಿಗೆ ಸಂಗ್ರಹಿಸುವಾಗ ಎಂ.ಪಿ., ಎಲ್.ಎಲ್.ಎ, ಸಚಿವರು, ಡಿ.ಸಿ, ಎಸ್.ಪಿ. ಮುಂತಾದ ಅಧಿಕಾರ ಬಲ ಉಳ್ಳವರು ಒತ್ತಾಯ ಪೂರ್ವಕವಾಗಿ ಎಂದೂ ಪಡೆಯರು. ಸಣ್ಣ ಪ್ರಮಾಣದಲ್ಲಿ ಕೊಡಲ್ಪಟ್ಟರೂ ಚಿಂತೆಯಿಲ್ಲ "ಹನಿ ಹನಿ ಗೂಡಿದರೆ ಹಳ್ಳ ಕಾಳು ಕಾಳು ಕೂಡಿದರೆ ಬಳ್ಳ" ಎಂಬಂತೆ ಭಕ್ತಪೂರ್ಣ ವಾಗಿ ಕೊಟ್ಟುದು ಶರಣ ಮೇಳದಂತಹ ಬೃಹತ್ ಕಾರ್ಯಕ್ರಮದ ಸಚೇತಕ ಶಕ್ತಿಯಾಗಿದೆ.

ಈ ಹಿನ್ನೆಲೆಯಲ್ಲಿ ಸಂಗ್ರಹಿಸುವವರ ಜವಾಬ್ದಾರಿ ಹಿರಿದಾಗಿರುತ್ತದೆ. ಬೆಂಗಳೂರು ಕಾರ್ಯಾಲಯದಿಂದ ರಸೀತಿ ಪುಸ್ತಕಗಳು ವಿತರಿಸಲ್ಪಡುತ್ತವೆ. ಕಳಿಸುವ ಸಿಬ್ಬಂದಿ ಪ್ರತಿವರ್ಷವೂ ಬದಲಾಗುತ್ತಾರೆ. ಹೀಗಾಗಿ ಕೆಲವೊಂದು ನಿಷ್ಠಾವಂತ ಶರಣರಿಗೆ ರಸೀತಿ ಪುಸ್ತಕ ಹೋಗುವುದೇ ಇಲ್ಲ. ಹಾಗೆ ಬರದೆ ಇದ್ದಾಗ ಉದ್ದೇಶ ಪೂರ್ವಕವಾಗಿ ನಾವು ಕಳಿಸಿಲ್ಲವೆಂದು ಬೇಸರ ಪಟ್ಟುಕೊಳ್ಳದೆ, ಫೋನ್ ಮಾಡಿ ಅಥವಾ ಪತ್ರ ಬರೆದು ರಸೀತಿ ಪುಸ್ತಕ, ಕರಪತ್ರ ತರಿಸಿಕೊಂಡು ಕಾರ್ಯೋನ್ಮುಖ ರಾಗಬೇಕು. ಭಿತ್ತಿಪತ್ರ (Wall Posters) ತರಿಸಿಕೊಂಡು ಗೋಡೆಗೆ ಹಚ್ಚಬೇಕು.

ದಿನದಿನಕ್ಕೆ ಬೆಲೆಗಳು ಏರುತ್ತಿವೆ. ಖರ್ಚು ವೆಚ್ಚ ಅಧಿಕಗೊಳ್ಳುತ್ತಿದೆ. ದೇಣಿಗೆ ಸಂಗ್ರಹಿಸದಿರಲು ಹತ್ತಾರು ನೆಪಗಳನ್ನು ಮುಂದಿಡಬಹುದು. ಆದರೆ ಈ ಕಾರ್ಯಕ್ಕಾಗಿ ದುಡಿಯುವುದು ತಮ್ಮ ಆದ್ಯ ಕರ್ತವ್ಯ ಎಂದುಕೊಳ್ಳಬೇಕು.

ಧರ್ಮಪಿತರು ಹೇಳುತ್ತಾರೆ :

ತಾಪತ್ರಯವ ಕಳೆದು ಪೂಜಿಸಿ,
ತಾಪತ್ರಯವ ಲಿಂಗದೇವನೊಲ್ಲ
ಲಿಂಗದೇವ ಬರಿ ಉದಕದಲ್ಲಿ ನೆನೆವನೆ ? ಬ.ವ.ದಿ.186

ಸಂಸಾರದ, ವ್ಯವಹಾರದ ತಾಪತ್ರಯಗಳು ಎಂದಿಗೂ ಮುಗಿಯುವುದಿಲ್ಲ. ಅವು ಸಮುದ್ರದ ಅಲೆಗಳಿದ್ದಂತೆ. ಅಲೆಗಳ ಮಧ್ಯೆಯೇ ಸ್ನಾನ ಮಾಡಿಕೊಂಡು ಹೊರಬರುವಂತೆ ತಾಪತ್ರಯಗಳ ಮಧ್ಯದಲ್ಲೇ ಲಿಂಗಾರಾಧನೆ, ಜಂಗಮಾರಾಧನೆ ಮಾಡಬೇಕು.

ದೇಣಿಗೆ ಸಂಗ್ರಹ ಮಾಡುವ ಶರಣರು ವ್ಯಾಪಕವಾಗಿ ಸಂಚರಿಸುವುದರಿಂದ ಧರ್ಮಕ್ಷೇತ್ರ ಕೂಡಲ ಸಂಗಮದ, ಶರಣ ಮೇಳದ ಪ್ರಚಾರವಾಗುವುದು. ಜೊತೆಗೆ ಧರ್ಮಪ್ರಚಾರವನ್ನೂ ಕೆಲವರು ಮಾಡಲು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುವರು. ಗುರು ಬಸವಣ್ಣನವರ ವ್ಯಕ್ತಿತ್ವ, ಇರುವ ತಪ್ಪುಕಲ್ಪನೆ, ಇಷ್ಟಲಿಂಗದ ಮಹತ್ವ ಮುಂತಾಗಿ ತಿಳಿಸಿಕೊಡಲು ಅನುವು ಸಿಗುವುದು.

ಹೆಚ್ಚುವರಿ ಹಣ -ಬೃಹತ್ ಪುತ್ಥಳಿ ನಿರ್ಮಾಣಕ್ಕೆ

ಬಸವ ಕಲ್ಯಾಣದಲ್ಲಿ ಸಾಗುತ್ತಿರುವ 108 ಅಡಿಯ ಬಸವ ಪುತ್ಥಳಿಯ ನಿರ್ಮಾಣ ಕಾರ್ಯವು ತೀವ್ರಗತಿಯಲ್ಲಿದ್ದು ಹಣ ಒದಗಿಸುವುದು ಅನಿವಾರ್ಯವಾಗಿದೆ. ಆದ್ದರಿಂದ ಶರಣ ಬಂಧುಗಳು ಶರಣ ಮೇಳದ ದೇಣಿಗೆ ಸಂಗ್ರಹಿಸುವಾಗ ಬಸವ ಪುತ್ಥಳಿಗೂ ಸಂಗ್ರಹಿಸುವ ಉದ್ದೇಶ ಇಟ್ಟುಕೊಳ್ಳ ಬೇಕು. ಶರಣ ಮೇಳದ ರಸೀತಿಯಲ್ಲೇ ಬಸವ ಪುತ್ಥಳಿಗೆ ಎಂದು ಬರೆದುಕೊಟ್ಟು, ನಮಗೆ ಪ್ರತ್ಯೇಕವಾಗಿ ಪಟ್ಟಿಯನ್ನು ಕೊಡಬೇಕು. ಹಿಂದಿನ ವರ್ಷಕ್ಕಿಂತ ಹೆಚ್ಚಾಗಿ ದೇಣಿಗೆ ಸಂಗ್ರಹ ವಾಗುವಂತೆ ಪ್ರಯತ್ನಿಸಿರಿ. ವಸ್ತುಗಳ ಬೆಲೆ ಏರಿರುವುದು ಒಂದು ಕಾರಣವಾದರೆ ಇನ್ನೊಂದು ಉದ್ದೇಶ ಒಂದು ವೇಳೆ ಮಿತವಾಗಿ ಶರಣ ಮೇಳಕ್ಕೆ ಖರ್ಚು ಮಾಡಿ ಹೆಚ್ಚುವರಿ ಹಣ ಉಳಿದರೆ ಅದನ್ನು ಕಟ್ಟಡನಿಧಿಗೆ ಮತ್ತು ಬಸವ ಪುತ್ಥಳಿಗಾಗಿ ಬಳಸಿಕೊಳ್ಳಲಾಗುವುದು. ಕೂಡಲ ಸಂಗಮದಲ್ಲಿ ಬುಕ್‌ಸ್ಟಾಲ್ ಕಟ್ಟಡ ಮತ್ತು ದೀಕ್ಷಾ ಮಂಟಪವನ್ನು ಕಟ್ಟಿಸಲಾಗುತ್ತಿದೆ.

ಶರಣ ಬಂಧುಗಳು ರಸೀತಿ ಪುಸ್ತಕ ತಲುಪದಿದ್ದವರು ಮರೆಯದೆ ತರಿಸಿಕೊಂಡು ಶರಣ ಮೇಳದ ದಾಸೋಹಕ್ಕೆ ದೇಣಿಗೆ ಸಂಗ್ರಹಿಸಬೇಕೆಂದು ಕೋರುತ್ತೇವೆ.

- ಮಾತಾಜಿ

ಲಿಂಗಾಯತ ಧರ್ಮ ಜಾಗೃತಿ ಅಭಿಯಾನ

2011ನೆಯ ಇಸವಿಯಲ್ಲಿ ಪುನಃ ಜನಗಣತಿಯನ್ನು ಭಾರತ ಸರ್ಕಾರ ಕೈಗೊಳ್ಳುವುದು ಜನಗಣತಿಯ ಅಂಕಣದಲ್ಲಿ ಲಿಂಗಾಯತ ಎಂದು ಬರೆಸುವ ಬಗ್ಗೆ ಜನಜಾಗೃತಿ ಯಾತ್ರೆಯನ್ನು ಏರ್ಪಡಿಸ ಬೇಕಾಗಿದೆ. ಇದಕ್ಕೆ ಸ್ವಯಂ ಸೇವಕ-ಸೇವಕಿಯರು ಬೇಕು. ಎಲ್ಲ ಮಟ್ಟದ ವಿದ್ಯಾಭ್ಯಾಸ ಹೊಂದಿದವರೂ ಬೇಕಾಗುತ್ತದೆ ಮತ್ತು ಎಲ್ಲ ವಯಸ್ಸಿನವರೂ ಬೇಕಾಗುತ್ತದೆ. ಸೇವಾ ದೃಷ್ಟಿಕೋನ ದಿಂದ 2010ನೆಯ ಇಸವಿಯನ್ನು ಧರ್ಮಜಾಗೃತಿಗಾಗಿ ಸದ್ವಿನಿಯೋಗ ಮಾಡಬೇಕು ಎನ್ನುವ ಶರಣ -ಶರಣೆಯರು ಉಭಯತರಿಗೂ ಅವಕಾಶವಿದೆ. ಆರ್ಥಿಕ ತೊಂದರೆ ಇದ್ದು ಮಾಸಿಕ ಗೌರವಧನ ನಿರೀಕ್ಷಿಸುವವರಿಗೆ ತಿಂಗಳ ವೇತನ ಕೊಟ್ಟು ಸೇವೆ ಮಾಡಲು ಅವಕಾಶ ಕಲ್ಪಿಸಲಾಗುವುದು. ಲಿಂಗಾಯತ ಧರ್ಮಜಾಗೃತಿ ಯಾತ್ರೆಯನ್ನು 2010ರ ಜನವರಿ ಮಾಸದಿಂದಲೇ ಆರಂಭಿಸುವ ಯೋಜನೆಯಿದೆ.

ಆಸಕ್ತಿ ಇರುವವರು ಬೇಗನೆ ಪತ್ರ ವ್ಯವಹಾರ ಮಾಡಬೇಕು. ದೂರವಾಣಿ ಮೂಲಕವೂ ಸಂಪರ್ಕಿಸ ಬಹುದು. ಸದೃಢವಾದ ಆರೋಗ್ಯವಿದ್ದು ಪ್ರವಾಸ ಮಾಡಲು ಶಕ್ತರಾಗಿರುವ ನಿವೃತ್ತರೂ ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಬಹುದು. ಕನ್ನಡ, ಮರಾಠಿ, ತಮಿಳು, ತೆಲುಗು ನಾಲ್ಕೂ ಭಾಷೆಯ ಕಾರ್ಯಕರ್ತರು ಬೇಕಾಗಿದ್ದಾರೆ. ಧರ್ಮ -ಸಮಾಜದ ಏಳ್ಗೆಗಾಗಿ ಕೈಲಾದಷ್ಟು ಸಮಯವನ್ನು ಒದಗಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ, 2035,
20ನೇ ಮುಖ್ಯ ರಸ್ತೆ, 2ನೇ ಬ್ಲಾಕ್
ರಾಜಾಜಿ ನಗರ, ಬೆಂಗಳೂರು -560010
ದೂ: 080-23131476

ಷಟ್‌ಕ್ರಿಯೆಗಳು

- ಮಾತಾಜಿ

ಷಟ್ ಸಂಜ್ಞೆಗಳಾದ 866666 ಇವುಗಳಲ್ಲಿ ಆರನೆಯ ಆರು ಸೂಚಿಸುವುದು ಷಟ್‌ಕ್ರಿಯೆಗಳನ್ನು. ಅಷ್ಟಾವರಣ, ಷಡಾಚಾರ (ಪಂಚಾಚಾರ), ಷಟ್‌ಸ್ಥಲ ಇವು ಗುರು ಬಸವಣ್ಣನವರ ಕಾಲದಿಂದ ಸೂತ್ರೀಕರಣಗೊಂಡು ಬಂದವು. ಸಮಾಜ ಸಂಘಟನೆಗೆ ಅತ್ಯವಶ್ಯವೆಂದು ಷಟ್‌ಸೂತ್ರಗಳನ್ನು 1988ರ ನಂತರ ಷಟ್‌ಶೀಲಗಳನ್ನು ಸಂಯೋಜಿಸಲಾಯಿತು.

ಒಬ್ಬ ಲಿಂಗಾಯತ ಧರ್ಮಾನುಯಾಯಿಯ ಕ್ರಿಯಾಚರಣೆ ಏನಿರಬೇಕು ಎಂದು ಧರ್ಮಪಿತರು ಆಶಯವಾಗಿತ್ತು ಎಂಬ ಬಗ್ಗೆ ನಾನು ತುಂಬಾ ಚಿಂತನೆ ಮಾಡುತ್ತಿರುವಾಗ ಒಂದು ದಿವಸ (22-9-09)ಶೂನ್ಯ ಸಂಪಾದನೆಯಲ್ಲಿ ಬಂದ ಅಲ್ಲಮಪ್ರಭುದೇವರ ಒಂದು ವಚನ ನನ್ನ ಗಮನ ಸೆಳೆಯಿತು. ಆ ವಚನ -

ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನು.
ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನು.
ಪ್ರಾಣದಲ್ಲಿ ಲಿಂಗವ ಸ್ವಾಯತವ ಮಾಡಿಕೊಂಡನು.
ಲಿಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನು.
ಜಂಗಮದಲ್ಲಿ ಪ್ರಸಾದವ ಸ್ವಾಯತವ ಮಾಡಿಕೊಂಡನು.
ಪ್ರಸಾದದಲ್ಲಿ ನಿತ್ಯವ ಸ್ವಾಯತವ ಮಾಡಿಕೊಂಡನು.
ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನು.
ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತ ನಿವಾಸಿಯಾಗಿ ಐದಾನೆ.
ನಮ್ಮ ಗುಹೇಶ್ವರ ಲಿಂಗದಲ್ಲಿ ಸಂಗನ ಬಸವಣ್ಣನ ಶ್ರೀಪಾದಕ್ಕೆ
ಶರಣೆಂದು ಧನ್ಯರಾಗಬೇಕು, ನಡೆಯಾ ಸಿದ್ಧರಾಮಯ್ಯಾ!

ಈ ಆಚರಣೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಧರ್ಮಪಿತರು ತಮ್ಮ ಅನುಯಾಯಿಗಳಿಗೆ ಒಂದು ಮಾದರಿ (Model)ಆಗಿದ್ದಾರೆ. ಆದ್ದರಿಂದ ಅನುಯಾಯಿಗಳೂ ಇವನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಧರ್ಮಪಿತ ಬಸವಣ್ಣನವರು ಅಳವಡಿಸಿಕೊಂಡ ಆರು ಕ್ರಿಯೆಗಳೆಂದರೆ 1.ಆಚಾರ 2.ಅರಿವು 3.ಲಿಂಗ 4.ಜಂಗಮ 5.ಪ್ರಸಾದ 6.ದಾಸೋಹ ಇವುಗಳ ಒಂದು ಪಟವನ್ನು ಹೀಗೆ ತಯಾರಿಸ ಬಹುದು.

ಆಚಾರ	ಶೌಚ	ಗುರುಕಾರುಣ್ಯ	ಧರ್ಮಗುರು ಪೂಜೆ	ಇಷ್ಟಲಿಂಗ ಪೂಜೆ	ಜಂಗಮ ಪೂಜೆ	ಶರಣರ ಸಂಗ
ಅರಿವು	ವಚನ ಸಾಹಿತ್ಯ ಅಧ್ಯಯನ	ಪಾರಾಯಣ	ಲೇಖನ	ಚಿಂತನೆ	ಪ್ರಸರಣ	ಆಚರಣೆ
ಲಿಂಗ	ದೇವನಲ್ಲಿ ವಿಶ್ವಾಸ ಲಿಂಗದೀಕ್ಷೆ	ಅರ್ಚನೆ ಅಷ್ಟವಿಧಾರ್ಚನೆ	ನೆನಹು ಲಿಂಗಸ್ತವನ	ತ್ರಾಟಕ ಅನುಸಂಧಾನ	ಲಿಂಗಧ್ಯಾನ ಧ್ಯಾನ	ಲಿಂಗಯೋಗ
ಜಂಗಮ	ತ್ಯಾಗಿ	ಧರ್ಮಪ್ರಚಾರಕ	ಸಹಧರ್ಮಿ	ಸಮಾಜ	ಅಗತ್ಯವಿದ್ದವ	ಸಕಲ ಜೀವರಾಶಿ
ಪ್ರಸಾದ	ಗುರುಪ್ರಸಾದ ದೀಕ್ಷೆ, ಶಿಕ್ಷೆ, ಮೋಕ್ಷ	ಲಿಂಗಪ್ರಸಾದ	ಜಂಗಮ ಪ್ರಸಾದ	ನಿತ್ಯಪ್ರಸಾದ	ಜ್ಞಾನಪ್ರಸಾದ	ಗಣಪ್ರಸಾದ
ದಾಸೋಹ	ತನು	ಮನ	ಧನ	ಅಭಿಮಾನ	ಸಮಯ	ಪ್ರಾಣ

ಆಚಾರ: ಆಚಾರ ಎಂದರೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಸತ್‌ಕ್ರಿಯೆಗಳ ಸಮುಚ್ಚಯ. ಇದರಲ್ಲಿ ನಾವು ಆರು ಅಂಗಗಳನ್ನು ಗುರುತಿಸಬಹುದು. 1.ಶೌಚ 2.ಲಿಂಗಧಾರಣೆ 3.ಧರ್ಮಗುರು

ಪೂಜೆ 4.ಇಷ್ಟಲಿಂಗ ಪೂಜೆ 5.ಜಂಗಮ ಪೂಜೆ 6.ಶರಣರ ಸಂಗ.

ಶೌಚ: ಶುಚಿತ್ವಕ್ಕೆ ಕಾರಣವಾಗುವ ಶೌಚಕ್ರಿಯೆ ಬಹುಮುಖ್ಯ. ಬಹಿರಂಗ ಶೌಚ ಮತ್ತು ಅಂತರಂಗ ಶೌಚ ಎಂದು ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಬಹಿರಂಗ ಶೌಚದಲ್ಲಿ ಮಲಮೂತ್ರ ವಿಸರ್ಜನೆ, ಗುದ ಗುಹೇಂದ್ರಿಯಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳುವುದು, ಜೊತೆಗೆ ನೀರಿನಿಂದ ತೊಳೆದು ನವದ್ವಾರಗಳನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮುಖ್ಯ. ಸ್ನಾನವು ಒಂದು ಚಿಕಿತ್ಸೆ.

ಮನುಷ್ಯನ ಬಹುಪಾಲು ಕಾಯಿಲೆಗಳಿಗೆ ಮಲಮೂತ್ರ ವಿಸರ್ಜನೆಯಲ್ಲಿಯ ದೋಷಗಳು ಕಾರಣವಾಗುತ್ತವೆ. ಮೂತ್ರ ವಿಸರ್ಜನೆ, ಮಲ ವಿಸರ್ಜನೆ ತಡೆದುಕೊಳ್ಳುವುದು ಮಲಬದ್ಧತೆ - ಅಂದರೆ ಮಲವು ಸರಿಯಾಗಿ ವಿಸರ್ಜನೆ ಆಗದೆ ಇರುವುದು ಕಾಯಿಲೆಗಳಿಗೆ ಆಹ್ವಾನ ನೀಡುವ ಕ್ರಿಯೆ. ನವದ್ವಾರಗಳು ಶರೀರವೆಂಬ ಮನೆಗೆ ಇರುವ ಒಂಬತ್ತು ಬಾಗಿಲುಗಳು. (1) ಬಾಯಿ (2) ಕಣ್ಣುಗಳು -2 (3) ಕಿವಿಗಳು -2 (4) ಮೂಗಿನ ಹೊರಳೆಗಳು (5) ಗುದ (6) ಗುಹ್ಯ ಇವುಗಳು ಸದಾ ಕೊಳೆಯನ್ನು ವಿಸರ್ಜಿಸುತ್ತಿರುತ್ತವೆ. ನೀರಿನಿಂದ ತೊಳೆದುಕೊಂಡು ಇವುಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದೇ ಬಹಿರ್‌ಶೌಚ. ಇದರ ಆಂತರಿಕ ಮುಖವೆಂದರೆ ನೈತಿಕ ಶುದ್ಧಿ.

ಪದಾರ್ಥ ತ್ಯಾಗ: ಪ್ರಸುತ್ತ ಇಂದ್ರಿಯಗಳನ್ನು ನಿಷಿದ್ಧವಾದುದನ್ನು ಅನುಭವಿಸುವುದರಲ್ಲಿ ತೊಡಗಿಸಬಾರದು. 1. ಬಾಯಿಯನ್ನು ನಿಷಿದ್ಧ ವಾದುದನ್ನು ತಿನ್ನಲು ಬಿಡಬಾರದು. 2. ಕಣ್ಣುಗಳು -ಪರಸತಿಯನ್ನು, ಅಸಹ್ಯದೃಶ್ಯಗಳನ್ನು ನೋಡಬಾರದು. 3. ಕಿವಿಗಳು ನಿಂದೆ -ಚಾಡಿ, ಅಶ್ಲೀಲ ಸಂಭಾಷಣೆ ಕೇಳಬಾರದು. 4.ಮೂಗಿನ ಹೊರಳೆಗಳು ನಿಷಿದ್ಧ ವಸ್ತುಗಳ ವಾಸನೆ ಕುಡಿದು ಹರ್ಷಿಸಬಾರದು. 5. ಗುದವು, ಅತಿ ಆಸೆಯಿಂದ ತಿಂದು ಅರ್ಜಿಣದಿಂದ ಬಳಲುತ್ತ ದಣಿಯಬಾರದು 6. ಗುಹ್ಯೇಂದ್ರಿಯವು ಸ್ವೇಚ್ಛಾ ಜೀವನ, ಅನೈತಿಕ ನಡೆಯಿಂದ ದೂರವಿಡಬೇಕು, ಪದಾರ್ಥ ತ್ಯಾಗಕ್ಕೆ ಅತ್ಯುತ್ತಮ ಸೂತ್ರವೆಂದರೆ:

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಿಸದಂತೆ ಇರಿಸು
ಲಿಂಗದೇವಾ.

ಕೆಟ್ಟುದರ ಕಡೆಗೆ ಹೋಗದಂತೆ ಹೆಳವನಾಗಬೇಕು; ಕೆಟ್ಟದನ್ನು ನೋಡದಂತೆ ಕುರುಡನಾಗಬೇಕು; ನಿಷಿದ್ಧವಾದುದನ್ನು ಕೇಳದಂತೆ ಕಿವುಡನಾಗಬೇಕು. ಪತಂಜಲಿಯ ಅಷ್ಟಾಂಗ ಯೋಗದಲ್ಲಿ ಬರುವ ಪ್ರತ್ಯಾಹಾರಕ್ಕೆ ಬಸವಯೋಗದ ಪದಾರ್ಥ ತ್ಯಾಗವನ್ನು ಹೋಲಿಸಬಹುದು.

ಪ್ರಸಾದ ಭೋಗ: ಇಂದ್ರಿಯಗಳನ್ನು ಅವುಗಳ ನಿಷಿದ್ಧ ಆಹಾರದಿಂದ ದೂರವಿಟ್ಟರೆ ಸಾಲದು; ಇಂದ್ರಿಯಗಳಿಗೆ ವಿಧಾಯಕವಾಗಿ ಆಹಾರವನ್ನು ಕೊಡಬೇಕು. ಅದೇ ಪ್ರಸಾದ ಭೋಗ. ಯಾವ ಕಾಲನ್ನು ಕೆಟ್ಟದ್ದರ ಹೋಗದಂತೆ ಕುಂಟಾಗಿ ಮಾಡಲಾಗಿತ್ತೋ ಆ ಕಾಲನ್ನು ಶರಣರೊಡನೆ ಮಾಡುವ ಸತ್ಸಂಗ ಗೋಷ್ಠಿಗೆ ಹೋಗಲು ಬಳಸಿಕೊಳ್ಳಬೇಕು. ಯಾವ ನಾಲಿಗೆಯನ್ನು ನಿಂದ್ಯವಾದ ಸಂಗತಿಗಳನ್ನು ಮಾತನಾಡಬಾರದೆಂದು ಮೂಕವಾಗಿ ಇಡಲಾಗಿತ್ತೋ ಆ ನಾಲಿಗೆಯಿಂದ ಲಿಂಗದೇವನ ನಾಮಾಮೃತವನ್ನು ಪಾನ ಮಾಡಬೇಕು. ಯಾವ ಕಿವಿಯಿಂದ ಕೆಟ್ಟದನ್ನು ಕೇಳಬಾರದೆಂದು ಕಿವುಡ ತನವನ್ನು ಶರಣನು ರೂಢಿಸಿಕೊಂಡಿದ್ದನೋ ಆ ಕಿವಿಯಿಂದ ಲಿಂಗದೇವನ ಮಹಿಮೆಯನ್ನು ಕೇಳಬೇಕು. ಯಾವ ಮನಸ್ಸನ್ನು ಅನ್ಯ ಚಿಂತನೆ ಮಾಡದೆ ಲಯ ಸ್ಥಿತಿಗೆ ತಂದಿದ್ದನೋ ಆ ಮನದಲ್ಲಿ ಲಿಂಗದೇವನ ನೆನಹನ್ನು ತುಂಬಬೇಕು. ಆಗ ಶರಣನು ದೇವನ ಚರಣ ಕಮಲದಲ್ಲಿ ತನ್ಮಯವಾದ ಭ್ರಮರನಾಗುವನು.

ಬಹಿರಂಗದ ಸ್ವಚ್ಛತೆಯೊಡನೆ ಆಂತರಂಗಿಕ ಶುದ್ಧಿಯೂ ಬಹಳ ಮುಖ್ಯ. ಬಹಿರಂಗದ ಶುಚಿತ್ವ ಕ್ರಿಯಾತ್ಮಕವಾದುದಾದರೆ ಆಂತರಂಗಿಕ ಶುದ್ಧಿ ಜ್ಞಾನಾತ್ಮಕ.

ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ

ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಲಿಂಗದೇವರನೊಲಿಸುವ ಪರಿ.

ಕಳುವಿನಿಂದ, ಹಿಂಸೆಯಿಂದ, ಸುಳ್ಳಿನಿಂದ, ಕೋಪದಿಂದ, ಅನ್ಯರ ಬಗೆಗಿನ ತಿರಸ್ಕಾರದಿಂದ ತನ್ನ ಸ್ತುತಿ ಮಾಡಿಕೊಳ್ಳುವಿಕೆಯಿಂದ, ಇನ್ನೊಬ್ಬರನ್ನು ಹಳಿಯುವಿಕೆಯಿಂದ ಸಾಧಕನು ದೂರವಿರಬೇಕು. ಇದರಿಂದ ಬಹಿರಂಗ ಶುದ್ಧಿಯಷ್ಟೇ ಅಲ್ಲ ಅಂತರಂಗ ಶುದ್ಧಿಯೂ ಸಾಧನೆಯಾಗಿ, ಪರಮಾತ್ಮನ ಒಲುಮೆಯು ಸಹ ಪ್ರಾಪ್ತಿಯಾಗುವುದು.

ಅಂತರಂಗ ಶುದ್ಧಿಗೆ ಅತಿ ಮುಖ್ಯ ಸಾಧನಗಳೆಂದರೆ ಪರಧನ, ಪರಸತಿ, ಪರದೈವದಿಂದ ದೂರವಿರುವುದು, ದೇವನ ಅನುಗ್ರಹದಲ್ಲಿ ಅಖಂಡ ವಿಶ್ವಾಸವಿಡುವುದು ಮುಂತಾದವು.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗ ಜಂಗಮ ಒಂದೆ ಎಂಬ;
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ;
ಛಲಬೇಕು ಶರಣಂಗೆ ಪರವಾದಿ ನಿಗ್ರಹದಲ್ಲಿ
ಛಲವಿಲ್ಲದವರ ಮೆಚ್ಚ ನಮ್ಮ ಲಿಂಗದೇವ.

ಆಚಾರದ ಮೊದಲನೆಯ ಪಾದ ಶೌಚವಾದರೆ, ಎರಡನೆಯ ಪಾದ ಗುರುಕಾರುಣ್ಯ, ಭೂಮಿಯನ್ನು ಹಸನುಗೊಳಿಸಿದ ಬಳಿಕ ಬೀಜವನ್ನು ಬಿತ್ತುವಂತೆ ಆಚಾರದಿಂದ ಶರೀರವೆಂಬ ಕ್ಷೇತ್ರವನ್ನು ಶುಚಿಗೊಳಿಸಿ ನಂತರ ಗುರುಕಾರುಣ್ಯದ ಬೀಜವನ್ನು ಬಿತ್ತಬೇಕು.

ಗುರುಕಾರುಣ್ಯವೆ ಸದಾಚಾರ,
ಗುರುಕಾರುಣ್ಯವೆ ಶಿವಾಚಾರ
ಗುರುಕಾರುಣ್ಯವೆ ಪ್ರಸಾದ ರುಚಿ,
ಮುಂದೆ ಗುರು, ಹಿಂದೆ ಲಿಂಗ ಲಿಂಗದೇವಾ.

ಗುರು ಕಾರುಣ್ಯವು ವ್ಯಕ್ತಿ ಜೀವನದ ಏಳಿಗೆಗೆ ಅತ್ಯಂತ ಅವಶ್ಯಕ. ಅದಕ್ಕಾಗಿ ಧರ್ಮಪಿತ ಬಸವಣ್ಣನವರು ಐಚ್ಛಿಕವಾಗಿದ್ದ ಗುರು ಕಾರುಣ್ಯವನ್ನು ಕಡ್ಡಾಯಗೊಳಿಸಿದರು. ಹುಟ್ಟಿದ ಮಗುವಿಗೆ ಲಿಂಗಧಾರಣೆ ಮಾಡುವ ಸಂಪ್ರದಾಯವನ್ನು ನೆಲೆಗೊಳಿಸಿದರು. ಗುರುಕಾರುಣ್ಯದ ವಿವಿಧ ಹಂತಗಳೆಂದರೆ ವಿಭೂತಿ ಧಾರಣೆ, ರುದ್ರಾಕ್ಷಿಧಾರಣೆ, ಮಂತ್ರೋಪದೇಶ ಮತ್ತು ಇಷ್ಟಲಿಂಗ ಧಾರಣೆ. ಶಿವಪಥವನರಿವರೆ ಗುರು ಪಥವೆ ಮೊದಲು ಎಂದು ಧರ್ಮಪಿತ ಬಸವಣ್ಣನವರು ಹೇಳುವಂತೆ ದಿವ್ಯಪಥವನ್ನು ಪ್ರವೇಶಿಸಲು ಗುರುಕಾರುಣ್ಯವೇ ಹೆಬ್ಬಾಗಿಲು. ಗುರು ಕಾರುಣ್ಯದ ಸಂಕೇತವಾಗಿ ಹಣೆಯ ಮೇಲೆ ಭಸ್ಮ ಕೊರಳಲ್ಲಿ ರುದ್ರಾಕ್ಷಿ ಎದೆಯ ಮೇಲೆ ಇಷ್ಟಲಿಂಗ ಇರಬೇಕು.

ಆಚಾರ ಕ್ರಿಯೆಯ ಮೂರನೆಯ ಪಾದ ಧರ್ಮಗುರು ಪೂಜೆ.

1. ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವಾ, ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲಸಿದ್ಧಮಲ್ಲಿಕಾರ್ಜುನಾ.

2. ಬಸವಣ್ಣನ ನೆನೆದು ಮಾಡುವ ಭಕ್ತಿ ನಡೆವುದಯ್ಯಾ
ಬಸವಣ್ಣನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ.

3. ಆದಿಯಲ್ಲಿ ನೀನೇ ಗುರುವಾದ ಕಾರಣ, ನಿನ್ನಿಂದ ಹುಟ್ಟಿತ್ತು ಲಿಂಗ;
ಆದಿಯಲ್ಲಿ ನೀನೇ ಲಿಂಗವಾದ ಕಾರಣ, ನಿನ್ನಿಂದ ಹುಟ್ಟಿತ್ತು ಜಂಗಮ
ಆದಿಯಲ್ಲಿ ನೀನೇ ಜಂಗಮವಾದ ಕಾರಣ, ನಿನ್ನಿಂದ ಹುಟ್ಟಿತ್ತು ಪ್ರಸಾದ
ಆದಿಯಲ್ಲಿ ನೀನೇ ಪ್ರಸಾದವಾದ ಕಾರಣ, ನಿನ್ನಿಂದ ಹುಟ್ಟಿತ್ತು ಪಾದೋದಕ
ಇಂತೀ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಸ್ವರೂಪ

ನೀನೆಯಾದ ಕಾರಣ, ಜಂಗಮ ಪ್ರಾಣಿಯಾಗಿ ಸದಾಚಾರಿಯಾದೆ.
ಅದು ಕಾರಣ, ನೀನೆ ಸರ್ವಾಚಾರ ಸಂಪನ್ನನಾಗಿ
ಪೂರ್ವಾಚಾರಿ ನೀನೆಯಾದ ಕಾರಣ,
ಗುಹೇಶ್ವರ ಲಿಂಗದಲ್ಲಿ ಚಂದಯ್ಯಂಗೆ
ಲಿಂಗದ ನಿಜವ ತಿಳುಹಾ ಸಂಗನಬಸವಣ್ಣಾ!

4. ಸುಖವೊಂದು ಕೋಟ್ಯಾನುಕೋಟಿ ಬಂದಲ್ಲಿ ಬಸವಣ್ಣನ ನೆನೆವೆ,
ದುಃಖವೊಂದು ಕೋಟ್ಯಾನುಕೋಟಿ ಬಂದಲ್ಲಿ ಬಸವಣ್ಣನ ನೆನೆವೆ,
ಲಿಂಗಾರ್ಚನೆಯ ಮಾಡುವಲ್ಲಿ ಬಸವಣ್ಣನ ನೆನೆವೆ,
ಬಸವಣ್ಣ ನೆನೆದಲ್ಲದೆ ಭಕ್ತಿಯಿಲ್ಲ; ಬಸವಣ್ಣ ನೆನೆದಲ್ಲದೆ ಮುಕ್ತಿಯಿಲ್ಲ
ಇದು ಕಾರಣ,
ಬಸವಣ್ಣ ಬಸವಣ್ಣ ಎನುತಿರ್ದೆನು ಕಾಣಾ, ಕಲಿದೇವಯ್ಯ.

ಲಿಂಗಾಯತ ಧರ್ಮ ಸಂಸ್ಥಾಪಕರಾದ ಧರ್ಮಗುರು ಬಸವಣ್ಣನವರನ್ನು ತ್ರಿಕರಣಗಳಿಂದ ಆರಾಧಿಸಬೇಕು. ಕೈಯಿಂದ ಪೂಜಿಸಿ, ನಾಲಿಗೆಯಿಂದ ಸ್ತುತಿಸಿ, ಮನದಿಂ ಧ್ಯಾನಿಸುವುದೇ ಬಸವಾಚಾರ. ಯಾವುದೇ ಸಮಾರಂಭ ಅದು ಸುಖದ ಸಮರಂಭವೇ ಇರಲಿ, ದುಃಖದ ಸಮಾರಂಭವೇ ಇರಲಿ ಗುರು ಬಸವಣ್ಣನವರನ್ನು ಪೂಜಿಸಿ ಕಾರ್ಯಕ್ರಮವನ್ನು ಆರಂಭಿಸಬೇಕು.

ಬಸವೇಶ್ವರ ಪೂಜಾವ್ರತ: ಮದುವೆ, ನಾಮಕರಣ, ಗೃಹಪ್ರವೇಶ, ಅಂಗಡಿ - ಕಾರ್ಖಾನೆ ಪ್ರಾರಂಭೋತ್ಸವ ಮುಂತಾದ ಸಂತೋಷದ ಸಮಾರಂಭವೇ ಇರಲಿ, ಲಿಂಗೈಕ್ಯ ಸಂಸ್ಕಾರ, ಲಿಂಗೈಕ್ಯ ಸಂಸ್ಮರಣೆ ಮುಂತಾದ ದುಃಖದ ಸನ್ನಿವೇಶಗಳೇ ಇರಲಿ ಅದರಲ್ಲಿ ಬಸವೇಶ್ವರ ಪೂಜಾವ್ರತ ಮಾಡಬೇಕು. ವಾರದಲ್ಲಿ ಒಮ್ಮೆಯಾದರೂ ಸಂಪೂರ್ಣವಾಗಿ ಬಸವೇಶ್ವರ ಪೂಜಾವ್ರತ ಆಚರಿಸಬೇಕು. ಏನಾದರೂ ಇಷ್ಟಾರ್ಥಗಳು ಸಿದ್ಧಿಯಾಗಬೇಕೆಂದಿದ್ದಲ್ಲಿ ನಿತ್ಯವೂ ಗುರು ಬಸವಣ್ಣನವರ 108 ಮಂತ್ರಗಳನ್ನು ಉಚ್ಚರಿಸುತ್ತ ಪುಷ್ಪಾರ್ಚನೆ ಮಾಡಬೇಕು; ವಾರಕ್ಕೊಮ್ಮೆ ಪೂರ್ತಿ ಪೂಜಾವ್ರತ ಆಚರಿಸಬೇಕು.

ಲಿಂಗಾಯತ ಧರ್ಮೀಯನ ಆಚಾರದ ಅತಿ ಮುಖ್ಯ ಅಂಗವೆಂದರೆ ಇಷ್ಟಲಿಂಗಧಾರಣೆ ಮತ್ತು ಪೂಜೆ. ಲಿಂಗಾಯತ ಧರ್ಮವು ನಿಂತಿರುವುದೇ ಲಿಂಗ ಆಯತ ತತ್ವದ ಮೇಲೆ. ದೇವರು ನಿರಾಕಾರನು. ಇಂಥ ಲಿಂಗದೇವನನ್ನು ಮನುಷ್ಯರ, ಪಶುಪಕ್ಷಿಗಳ, ಕ್ರಿಮಿಕೀಟಗಳ ಆಕಾರದಲ್ಲಿ ಪೂಜಿಸುವುದು ದೇವರ ಪಾವಿತ್ರ್ಯಕ್ಕೆ ಚ್ಯುತಿ ತರುವುದೆಂದು ಗುರು ಬಸವಣ್ಣನವರು ಗೋಳಾಕಾರದಲ್ಲಿ ದೇವನನ್ನು ಸಾಕಾರಗೊಳಿಸಿದರು. ನಿತ್ಯವೂ ಪೂಜಿಸಲೆಂದು ಅಂಗದ ಮೇಲೆ ಧರಿಸಿಕೊಳ್ಳಲು ತಿಳಿಸಿದರು. ಈ ಇಷ್ಟಲಿಂಗವೆಂಬ ಗಣಲಾಂಛನವನ್ನು ಧರಿಸಿದವರೆಲ್ಲರೂ ಸಮಾನರೆಂದು ಬೋಧಿಸಿದರು. ಇಷ್ಟಲಿಂಗವು ವೈಯಕ್ತಿಕ ಉಪಾಸನಾ ಸಾಧನವಷ್ಟೇ ಅಲ್ಲ ಎಲ್ಲರನ್ನು ಬೆಸೆಯುವ ಗಣ ಲಾಂಛನವೂ ಅಹುದು. ಆದ್ದರಿಂದ ಇದರ ಧಾರಣೆ ಮತ್ತು ನಿತ್ಯಪೂಜೆ ಕಡ್ಡಾಯ ವಿಧಿಗಳು.

ಆಚಾರ ಕ್ರಿಯೆಯ 5ನೆಯ ಪಾದ "ಜಂಗಮ ಪೂಜೆ" ನಿರಾಕಾರನಾದ ಸೃಷ್ಟಿಕರ್ತ ಲಿಂಗದೇವನು ಜಗತ್ತಿನ ಮಾನವರನ್ನು ರಕ್ಷಿಸಲು ಗುರು ಬಸವಣ್ಣನವರನ್ನು ಅನುಗ್ರಹಿಸಿದ. ಅವರು ನೀಡಿದ ತತ್ವಗಳನ್ನು ಗುರುವು ದೀಕ್ಷೆ ಮತ್ತು ಶಿಕ್ಷಣದ ಮೂಲಕ ಬೋಧಿಸಿ ಜನರನ್ನು ಮುನ್ನಡೆಸುವನು. ದೇವರು ಇಷ್ಟಲಿಂಗರೂಪದಲ್ಲಿ ಅಂಗದ ಮೇಲೆ ನೆಲೆಸಿ ಪೂಜೆಗೊಳ್ಳುವನು, ಜಂಗಮ ರೂಪದಲ್ಲಿ ಮಾರ್ಗದರ್ಶನ ಮಾಡುವನು. ಸಮಾಜ ಮತ್ತು ವ್ಯಕ್ತಿಗಳನ್ನು ಬೆಸೆಯುವ ಕೊಂಡಿ ಜಂಗಮ. ಸಮಾಜ ಪ್ರೇಮಿಯಾದ ಜಂಗಮನು ದೇವನ ಪ್ರತಿನಿಧಿಯಾದ ಕಾರಣ ಅವನನ್ನು ಪೂಜಿಸಬೇಕಲ್ಲದೆ ತನು ಮನ ಧನಗಳಿಂದ ಅವನು ಕೈಗೊಂಡ ಕಾರ್ಯಕ್ಕೆ ನೆರವಾಗಬೇಕು. ಆಚಾರ ಕ್ರಿಯಯು ಪೂರ್ಣಗೊಳ್ಳುವುದು ಶರಣ ಸಂಗದಲ್ಲಿ ಭಾಗಿಯಾಗುವುದರಿಂದ. ಪ್ರತಿಯೊಬ್ಬ ಅನುಯಾಯಿಯೂ ಶರಣರೊಡನೆ ಅನುಭವ ಗೋಷ್ಠಿಯಲ್ಲಿ ಭಾಗಿಯಾಗುವ ನಿಯಮವನ್ನಿಟ್ಟುಕೊಳ್ಳಬೇಕು. ಬಸವ ಮಂಟಪ ಕಟ್ಟಿ ವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆ ನಡೆಸಿ, ಭಾಗವಹಿಸಬೇಕು.

ಮಡಿಕೆಯ ಮಾಡುವಡೆ ಮಣ್ಣೆ ಮೊದಲು
ತೊಡುಗೆಯ ಮಾಡುವಡೆ ಹೊನ್ನೆ ಮೊದಲು

ಶಿವಪಥವನರಿವಡೆ ಗುರುಪಥವೆ ಮೊದಲು
ಲಿಂಗದೇವರನರಿವಡೆ ಶರಣರ ಸಂಗವೆ ಮೊದಲು.

ಮಡಿಕೆಯನ್ನು ಮಾಡಲು ಮಣ್ಣು ಬೇಕೇ ಬೇಕು. ತೊಡುಗೆಯನ್ನು ಮಾಡಲು ಹೊನ್ನು ಬೇಕೇ ಬೇಕು. ದಿವ್ಯ ಪಥವನ್ನು ಅರಿಯಲು ಗುರುವಿನ ಅನುಗ್ರಹ ಮಾರ್ಗದರ್ಶನ ಬೇಕೇ ಬೇಕು. ಹಾಗೆ ಲಿಂಗದೇವನ ನಿಜವಾದ ಸ್ವರೂಪವನ್ನು ಅರಿಯಲು ಶರಣರ ಸಂಗ ಬೇಕೇ ಬೇಕು. ಮೂಢನಂಬಿಕೆ, ಕಂದಾಚಾರ ತುಂಬಿರುವ ಈ ದೇಶದಲ್ಲಿ ನಿಜವಾದ ದೇವರಲ್ಲಿ ವಿಶ್ವಾಸ, ದೇವರ ಸ್ವರೂಪ ಕುರಿತು ತಿಳುವಳಿಕೆ ಅಳವಡಬೇಕಾದರೆ ಸತತವಾಗಿ ಶರಣರ ಸಂಗದಲ್ಲಿ ಒಡನಾಡುತ್ತಿದ್ದರೆ ಮಾತ್ರ ಸಾಧ್ಯ. ಒಂದು ಧರ್ಮದ ಸಮಗ್ರ ಪರಿಚಯವಾಗಬೇಕಾದರೆ ವಚನ ಸಾಹಿತ್ಯ ಅಧ್ಯಯನದೊಡನೆ ಶರಣರ ಒಡನಾಟವೂ ಅತಿ ಮುಖ್ಯ.

ಅಂಗದಲ್ಲಿ ಆಚಾರವನ್ನು ಅಳವಡಿಸಿಕೊಂಡ ಗುರು ಬಸವಣ್ಣನವರು ಆ ಆಚಾರದ ಬಗ್ಗೆ ಅರಿವನ್ನು ಅಳವಡಿಸಿಕೊಂಡರು. ಮಕ್ಕಳು ಹಿರಿಯರು ಮಾಡುವ ಆಚರಣೆಯನ್ನು ನೋಡಿ ಯಾಂತ್ರಿಕವಾಗಿ ಅನುಕರಿಸು(Imitation)ವರು. ನಂತರ ದೊಡ್ಡವರಾದಾಗ ಅರಿವನ್ನು ಹೊಂದಿ ಆಚರಿಸಿದರೆ ಮಾತ್ರ ಅದು ಅನುಸರಣೆ (following) ಆಗುತ್ತದೆ. ಅರಿವಿನ ಬೆಳಕು ಇದ್ದಾಗಲೇ ಆಚರಣೆಯ ದರ್ಪಣದ ನೆರವಿನಿಂದ ವಸ್ತುವನ್ನು ನೋಡಲು ಸಾಧ್ಯ. ಅದಕ್ಕಾಗಿಯೇ ಶರಣರು ತನ್ನ ಅರಿವೇ ಗುರು ಎಂಬ ಮಹತ್ವ ಪೂರ್ಣ ಸಂದೇಶ ನೀಡಿದರು. ಟ್ಯೂಬ್ ಹಾಕಿರುತ್ತೇವೆ; ಅದರಲ್ಲಿ ವಿದ್ಯುತ್ ಪ್ರವಹಿಸಿದಾಗಲೇ ಅದು ಟ್ಯೂಬ್‌ಲೈಟ್ ಅನ್ನಿಸಿಕೊಳ್ಳುವುದು. ಅದೇ ರೀತಿ ಆಚಾರದ ಟ್ಯೂಬಿನಲ್ಲಿ ಅರಿವಿನ ವಿದ್ಯುತ್ ಹರಿದಾಗಲೇ ಆಚರಣೆಗೆ ಬೆಲೆ.

ಲಿಂಗಾಯತ ಧರ್ಮೀಯನು ಅರಿವು ಪಡೆದುಕೊಳ್ಳಬೇಕಾದುದು ವಚನ ಸಾಹಿತ್ಯದ ಸಮಗ್ರ ಅಧ್ಯಯನದಿಂದ. ವಚನ ಸಾಹಿತ್ಯವೇ ಲಿಂಗಾಯತ ಧರ್ಮದ ಸಂವಿಧಾನ. ವಚನ ಸಾಹಿತ್ಯವು ಲಿಂಗಾಯತ ಧರ್ಮೀಯನಿಗೆ ಪಠ್ಯಪುಸ್ತಕ (Text Book) ಇನ್ನಿತರ ಸಾಹಿತ್ಯ ಸಹಾಯಕ ಪುಸ್ತಕ (Reference) ವಿದ್ದಂತೆ, ವಿದ್ಯಾರ್ಥಿಗೆ ಪಠ್ಯಪುಸ್ತಕ ಹೇಗೆ ಕಡ್ಡಾಯವಾಗಿರುವುದೋ ಹಾಗೆ ಲಿಂಗಾಯತ ಧರ್ಮೀಯನು ವಚನ ಸಾಹಿತ್ಯದ 1. ಅಧ್ಯಯನ 2. ಪಾರಾಯಣ 3. ಲೇಖನ 4. ಚಿಂತನ 5. ಪ್ರಸರಣ ಮತ್ತು 6. ಆಚರಣೆ ಎಂಬ ಆರು ಕ್ರಿಯೆಗಳನ್ನು ಅಳವಡಿಸಿಕೊಳ್ಳಬೇಕು.

1. ಅಧ್ಯಯನ : ನಿತ್ಯವೂ ವಚನ ಸಾಹಿತ್ಯವನ್ನು ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು.

2. ಪಾರಾಯಣ : ವಿಶೇಷ ದಿನಗಳಂದು ಕೆಲವೊಂದು ಕೃತಿಗಳ ಪಾರಾಯಣ ಮಾಡುವ ಧಾರ್ಮಿಕ ವಿಧಿಯನ್ನು ರೂಢಿಸಿಕೊಳ್ಳಬೇಕು. ಗುರು ಬಸವಣ್ಣನವರ ವಚನಗಳನ್ನು, ಶ್ರೀ ಸಿದ್ಧರಾಮೇಶ್ವರರ ತ್ರಿವಿಧಿಗಳನ್ನು, ಅಕ್ಕಮಹಾದೇವಿಯವರ ಯೋಗಾಂಗ ತ್ರಿವಿಧಿಯನ್ನು - ಹೀಗೆ ವ್ರತವೆಂಬಂತೆ ಪಾರಾಯಣ ಮಾಡಬೇಕು.

3. ಲೇಖನ: ಪ್ರತಿನಿತ್ಯ ಇಂತಿಷ್ಟು ಎಂದು ಆದಿ ಶರಣರ ವಚನಗಳನ್ನು ಬರೆಯುವ ಪದ್ಧತಿ ಇಟ್ಟುಕೊಳ್ಳಬೇಕು. ಕೇವಲ ಮಂತ್ರವನ್ನು ದಿನಾಲು 108 ಬರೆಯುತ್ತ ಹೋದರೆ ಭಕ್ತಿವೃದ್ಧಿಯಾಗಿ, ಪುಣ್ಯ ಪ್ರಾಪ್ತಿಯಾಗಬಹುದು. ಆದಿ ಶರಣರ ವಚನಗಳನ್ನು ಬರೆಯುತ್ತಾ ಹೋದರೆ ಭಕ್ತಿ ವೃದ್ಧಿ, ಪುಣ್ಯ ಪ್ರಾಪ್ತಿಯ ಜೊತೆಗೆ ನೈತಿಕ ಮೌಲ್ಯಗಳು ಅಳವಡುವುದೇ ಅಲ್ಲದೆ. ಜ್ಞಾನ ಸಂಪಾದನೆಯೂ ಆಗಿ ಆತ್ಮಬಲವು ವೃದ್ಧಿಯಾಗುತ್ತದೆ.

4. ಚಿಂತನೆ: ವಚನಗಳು ಅನುಭಾವದ ನುಡಿಗಳು; ಆತ್ಮಾನುಭೂತಿಯ ಅಮೃತ ಬಿಂದುಗಳು. ಯಾಂತ್ರಿಕವಾಗಿ ಓದಿದರೆ, ಬರೆದರೆ ಸಾಲದು ಒಂದೊಂದು ವಚನವನ್ನು ಆಯ್ದುಕೊಂಡು ಚಿಂತನೆ ಮಾಡಬೇಕು. ಅದರ ಹಿಂದಿನ ಪರಿಕಲ್ಪನೆ ಕುರಿತು ಆಲೋಚಿಸಬೇಕು.

5. ಪ್ರಸರಣ : ತಾನು ಕಂಡುಂಡ ಪರಮ ಸತ್ಯವನ್ನು ಇನ್ನಿತರರೂ ಅರಿತುಕೊಳ್ಳಲಿ ಎಂಬ ಕಳಕಳಿಯಿಂದ ಪ್ರತಿಯೊಬ್ಬರೂ ವಚನ ಸಾಹಿತ್ಯದ ಪ್ರಚಾರ, ಪ್ರಸಾರ ಮಾಡಬೇಕು. ವಚನಗಳ ಚಿಕ್ಕಚಿಕ್ಕ ಹೊತ್ತಿಗೆಗಳನ್ನು ಮಾಡಿ ನಾಮಕರಣ, ವಿವಾಹ, ಗೃಹಪ್ರವೇಶ, ಲಿಂಗೈಕ್ಯ ಸಂಸ್ಮರಣೆ ಮುಂತಾದ ಸಮಾರಂಭಗಳಲ್ಲಿ ಉಚಿತವಾಗಿ ಹಂಚಬೇಕು.

6. ಆಚರಣೆ : ವಚನ ವಾಙ್ಮಯವು ಬೋಧಿಸುವ ಮೌಲ್ಯಗಳನ್ನು, ಆದರ್ಶಗಳನ್ನು ತಮ್ಮ ಜೀವನದಲ್ಲಿ ಆಚರಣೆ ಮಾಡುವುದೂ ಅಷ್ಟೆ ಮಹತ್ವಪೂರ್ಣ. ಒಳ್ಳೆಯ ಬೀಜಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಕಟ್ಟಿಟ್ಟರೆ ಅವು ಮೊಳೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ತಾತ್ವಿಕ ಚಿಂತನೆಯನ್ನು ಜೀವನ ಕ್ಷೇತ್ರದಲ್ಲಿ ಬಿತ್ತದೆ ಹೋದರೆ ಏನೂ ಪ್ರಯೋಜನವಿಲ್ಲ.

ಹೀಗೆ ಈ ಆರೂ ಆಚರಣೆಗಳಿಂದ ನಾವು ವಚನ ಸಾಹಿತ್ಯದ ಮೂಲಕ "ಅರಿವು" ಪಡೆಯಬಹುದು.

ಅರಿವಿನಲ್ಲಿ ಲಿಂಗಜ್ಞಾನ

ಆಚಾರವನ್ನು, ಅರಿವನ್ನು ಅಳವಡಿಸಿಕೊಂಡ ಬಳಿಕ ಲಿಂಗದೇವನ ನಿಜ ಸ್ವರೂಪವನ್ನು ಅರಿತು, ಅರ್ಚನೆ ಅನುಸಂಧಾನ ಅಳವಡಿಸಿಕೊಳ್ಳಬೇಕು. ಈ ಕ್ರಿಯೆಯ 6 ಅಂಗಗಳೆಂದರೆ 1. ಲಿಂಗದೀಕ್ಷೆ 2.ಲಿಂಗಾರ್ಚನೆ 3.ಲಿಂಗಸ್ತವನ 4.ಲಿಂಗಾನುಸಂಧಾನ 5. ಲಿಂಗಧ್ಯಾನ 6. ಲಿಂಗಯೋಗ.

1. ಇಷ್ಟಲಿಂಗದೀಕ್ಷೆ : ಸೃಷ್ಟಿಕರ್ತನಾದ ಲಿಂಗದೇವನೊಬ್ಬನೇ ಪರಮೋನ್ನತ ಸತ್ಯ. ಅವನು ಸರ್ವಜ್ಞ, ಸರ್ವಶಕ್ತ ಎಂಬ ವಿಶ್ವಾಸ ಅಳವಡಿಸಿಕೊಳ್ಳುವುದೇ ಅಲ್ಲದೆ ಆ ಲಿಂಗದೇವನನ್ನು ಪೂಜಿಸಲು ಅನುವಾಗುವಂತೆ ಇಷ್ಟಲಿಂಗ ದೀಕ್ಷೆಯನ್ನು ಪಡೆಯಬೇಕು. ಈ ದೀಕ್ಷೆ ಶರಣ ಪಥಕ್ಕೆ ಹೆಬ್ಬಾಗಿಲಿನಂತೆ. ಪ್ರತಿಯೊಂದು ಧರ್ಮಕ್ಕೂ ಒಂದು ಪ್ರಧಾನವಾದ ದೀಕ್ಷಾ ಸಂಸ್ಕಾರ ಇರುತ್ತದೆ. ಲಿಂಗಾಯತ ಧರ್ಮಕ್ಕೆ ಲಿಂಗಾಯತ ಧರ್ಮ ದೀಕ್ಷೆಯೇ ಮುಖ್ಯ ಸಂಸ್ಕಾರ. ಮಗುವು ತಾಯಿಯ ಗರ್ಭದಲ್ಲಿರುವಾಗಲೇ ಒಮ್ಮೆ ಮಂತ್ರೋಪದೇಶವನ್ನು ನೀಡಲಾಗಿರುತ್ತದೆ. ತಾಯಿಯ ಮೂಲಕ ಮಗುವು ಆಹಾರವನ್ನು ಸ್ವೀಕರಿಸುತ್ತದೆ, ಉಸಿರಾಡುತ್ತದೆ. ಹಾಗೆಯೇ ತಾಯಿಯ ಮೂಲಕವೇ ಮಗುವು ಧಾರ್ಮಿಕ ಸಂಸ್ಕಾರವನ್ನೂ ಹೊಂದಲಿ ಎಂಬ ಆಶಯ ಇಲ್ಲಿದೆ. ಇದೇ ಇಷ್ಟಲಿಂಗವನ್ನು ಹೆರಿಗೆಯಾದ ನಂತರ ಮಗುವಿಗೆ "ಲಿಂಗಧಾರಣೆ" ಎಂಬ ಕ್ರಿಯೆಯ ಮೂಲಕ ಧರಿಸಲಾಗುವುದು. ಮಗುವು ಬಾಲ್ಯಾವಸ್ಥೆ ಕಳೆದು ಕನ್ಯಾವಸ್ಥೆಗೆ / ಯೌವ್ವನಕ್ಕೆ ಕಾಲಿಡುವಾಗ ಅಂದರೆ ಹನ್ನೆರಡು, ಹದಿಮೂರು ವರ್ಷಕ್ಕೆ ಇಷ್ಟಲಿಂಗದೀಕ್ಷೆ ಹೊಂದಬೇಕು. ಒಂದು ವೇಳೆ ಆಗ ಹೊಂದಿರದಿದ್ದರೂ ನಂತರ ತಿಳುವಳಿಕೆ ಬಂದಾಗಲಾದರೂ ದೀಕ್ಷೆಯನ್ನು ಪಡೆಯಬೇಕು.

2. ಇಷ್ಟಲಿಂಗಾರ್ಚನೆ : ಆದಿ ಶರಣರ ಕಾಲದಲ್ಲಿ ದಿನದಲ್ಲಿ ಮೂರು ಬಾರಿ ಲಿಂಗಾರ್ಚನೆ ಮಾಡುತ್ತಿದ್ದರು. ಬದಲಾದ ಕಾಲಮಾನದಲ್ಲಿ ಕೆಲವರನ್ನು ಹೊರತು ಪಡಿಸಿದರೆ ಎಲ್ಲರಿಗೂ 3 ಬಾರಿ ಲಿಂಗಾರ್ಚನೆ ಮಾಡಲು ಸಾಧ್ಯವಾಗದು. ಆದ್ದರಿಂದ ಬೆಳಿಗ್ಗೆ - ರಾತ್ರಿ ಹೀಗೆ ಎರಡು ಹೊತ್ತು ಮಾಡಬೇಕು. ಯಾವುದೇ ಕಾಯಕದವರಿರಲಿ ಎರಡು ಹೊತ್ತು ಮಾಡಲು ಅನಿವಾರ್ಯ ವಾಗಿ ಆಗದಿದ್ದರೆ ಕನಿಷ್ಠ ಪಕ್ಷ ಒಮ್ಮೆಯಾದರೂ, ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಮಾಡಲೇ ಬೇಕು. ಇದು ಲಿಂಗಾಯತ ಧರ್ಮೀಯನ ಕಡ್ಡಾಯ ಆಚರಣೆ.

ಅಷ್ಟವಿಧಾರ್ಚನೆಯು ಲಿಂಗಾರ್ಚನೆಯ ಮುಖ್ಯವಿಧಿ. ಇಷ್ಟಲಿಂಗಕ್ಕೆ ಮಜ್ಜನ, ವಿಭೂತಿ -ರುದ್ರಾಕ್ಷಿಧಾರಣೆ, ಗಂಧ -ಅಕ್ಷತೆಯ ಲೇಪನ, ಪತ್ರೆ -ಪುಷ್ಪಾರ್ಚನೆ, ಧೂಪ, ಆರತಿ, ನೈವೇದ್ಯ ಅಷ್ಟವಿಧಾರ್ಚನೆಯ ಅಂಗಗಳು. ಇದು ದೇವರಿಗೆ ಭಕ್ತ ಮಾಡುವ ಕೃತಜ್ಞತಾರ್ಪಣೆ (Thanks giving) ಸೃಷ್ಟಿಕರ್ತ ಲಿಂಗದೇವನು ಪಂಚಭೂತಾತ್ಮಕ ಜಗತ್ತನ್ನು, ಮಾನವ ಜೀವಿಗಳನ್ನು ಇನ್ನಿತರ ಜೀವರಾಶಿಯನ್ನು ಹುಟ್ಟಿಸಿರುವ ಕಾರಣ ದೇವರಿಗೆ ಕೃತಜ್ಞತೆಯನ್ನು ಅವನು ನೀಡಿರುವ ವಸ್ತುಗಳಿಗೆ ನಮ್ಮ ಭಕ್ತಿಯನ್ನು ಸೇರಿಸಿ ಅರ್ಪಿಸುವ ಮೂಲಕ ಸಲ್ಲಿಸಬೇಕು.

3. ಲಿಂಗಸ್ತವನ : ದೇವರಲ್ಲಿ ವಿಶ್ವಾಸವಿಟ್ಟು ಅವನ ಸಾಕಾರ ಕುರುಹಾದ ಇಷ್ಟಲಿಂಗವನ್ನು ದೀಕ್ಷೆಯ ಮೂಲಕ ಧರಿಸಿ, ಅಷ್ಟವಿಧಾರ್ಚನೆ ಮಾಡುತ್ತ ಭಕ್ತಿಯನ್ನು ಸಮರ್ಪಿಸುವುದಷ್ಟೇ ಸಾಲದು, ದೇವರ ಸ್ವರೂಪ ಜ್ಞಾನವನ್ನು ಪಡೆಯಬೇಕು, ಆತ್ಮ-ಪರಮಾತ್ಮ ಕುರಿತು ಚಿಂತನೆ ಮಾಡಬೇಕು. ಕಣ್ಣು ಇದ್ದು, ಕನ್ನಡಿಯು ಇದ್ದರೂ ಬೆಳಕಿಲ್ಲದಿದ್ದರೆ ವಸ್ತುವನ್ನು ಅಥವಾ ಪ್ರತಿಬಿಂಬವನ್ನು ನೋಡಲು ಹೇಗೆ ಸಾಧ್ಯವಿಲ್ಲವೋ ಹಾಗೆ ದೇವರ ಸ್ವರೂಪ ಜ್ಞಾನವಿಲ್ಲದೆ ಹೊರತು ದಿವ್ಯಾನಂದ ಸವಿಸಲಾಗದು.

4. ಲಿಂಗಾನುಸಂಧಾನ : ಇಷ್ಟಲಿಂಗವು ದೇವರ ಕುರುಹು. ನಿರಾಕಾರನಾದ ದೇವನನ್ನು

ಮನುಷ್ಯರು, ಪಶುಪಕ್ಷಿಗಳು, ಕ್ರಿಮಿಕೀಟಗಳ ರೂಪದಲ್ಲಿ ಆರಾಧಿಸಬಾರದು. ದೇವರು ಸೃಷ್ಟಿ ಮಾಡಿರುವ ಈ ಬ್ರಹ್ಮಾಂಡವು ಗೋಲಾಕಾರದಲ್ಲಿದೆ ಎಂದು ಅದೇ ಆಕಾರದಲ್ಲಿ ಇಷ್ಟಲಿಂಗವಾಗಿ ಸಾಕಾರಗೊಳಿಸಿದರು ಗುರು ಬಸವಣ್ಣನವರು. ಇಷ್ಟಲಿಂಗವನ್ನು ಧರಿಸಿದವರೆಲ್ಲ ಸಮಾನರು. ಅವರ ಮಧ್ಯೆ ಜಾತಿ, ವರ್ಣ, ಅಂತಸ್ತು ಭೇದ ಮಾಡಬಾರದು ಎಂದು ಗುರು ಬಸವಣ್ಣನವರು ಹೇಳಿದ ಪ್ರಕಾರ ಇದು ಉತ್ತಮ ಗಣಲಾಂಛನವೂ ಆಯಿತು. ಜೊತೆಗೆ ಇಷ್ಟಲಿಂಗವು ದೃಷ್ಟಿಯೋಗಕ್ಕೆ ಅನುಕೂಲಕರವಾದ ಸಾಧನ. ಸಾಂಪ್ರದಾಯಿಕವಾಗಿ ಜನರು ಭಕ್ತಿಗೆ ಒಂದು ಉಪಾಸ್ಯವಸ್ತು (ಉದಾ:ಸ್ಥಾವರ ಲಿಂಗ), ಯೋಗಕ್ಕೆ ಬೇರೊಂದು ವಸ್ತು -ಹೀಗೆಲ್ಲ ಬಳಸುತ್ತಾರೆ. ಆದರೆ ಇಷ್ಟಲಿಂಗವು ಎಲ್ಲ ಆವಶ್ಯಕತೆಗಳನ್ನೂ ಪೂರೈಸುವ ಉಪಾಸ್ಯ ವಸ್ತುವಾಗಿರುವುದು ಅದರ ಹೆಗ್ಗಳಿಕೆ. ಹೀಗಾಗಿ ತ್ರಾಟಕಯೋಗ ಅಥವಾ ದೃಷ್ಟಿಯೋಗಕ್ಕೆ ಇದು ಶ್ರೇಷ್ಠ ಸಾಧನವಾಗಿದೆ. ಮೂಗಿನ ನೇರಕ್ಕೆ 12 ಅಂಗುಲ ದೂರದಲ್ಲಿ ಅಥವಾ ಭ್ರೂಮಧ್ಯಕ್ಕೆ 12 ಅಂಗುಲ ದೂರದಲ್ಲಿ ಎಡಗೈಯನ್ನು ಇಷ್ಟಲಿಂಗ ಸಹಿತವಾಗಿ ಹಿಡಿದು ಅರೆತೆರದ ಕಣ್ಣಿನಿಂದ (ಅನಿಮಿಷ ದೃಷ್ಟಿ) ದಿಟ್ಟಿಸಿ ನೋಡುತ್ತ ನಿಧಾನವಾಗಿ ಉಸಿರಾಡುತ್ತ ಮನಸ್ಸಿನಲ್ಲಿ ಷಡಕ್ಷರಿ ಮಂತ್ರ "ಓಂ ಲಿಂಗಾಯ ನಮಃ" ಪಠಿಸಬೇಕು. ಹಿಂಬದಿಯಲ್ಲಿ ಒಂದು ದೀಪವನ್ನು ಹಚ್ಚಿಟ್ಟು ಅದರ ಕಾಂತಿಯು ಇಷ್ಟಲಿಂಗದ ಹೊಳಪುಳ್ಳ ಕಂತೆಯಲ್ಲಿ ಪ್ರತಿಫಲಿಸುವಂತೆ ಮಾಡಿ ಅದರ ಮೇಲೆ ದೃಷ್ಟಿ ನಿಲ್ಲಿಸಬೇಕು.

5. ಲಿಂಗಧ್ಯಾನ : ಹೀಗೆ ತ್ರಾಟಕಯೋಗವನ್ನು ಮಾಡಿದ ನಂತರ ಕಣ್ಣುಗಳನ್ನು ಪೂರ್ತಿಮುಚ್ಚಿ ಅಂತರ್ಮುಖಿಯಾಗಿ ಧ್ಯಾನವನ್ನು ಮಾಡಬೇಕು. ವಿಶ್ವದಲ್ಲಿ ತುಂಬಿರುವ ಪರಮಾತ್ಮನ ದಿವ್ಯ ಚೈತನ್ಯ ಶಕ್ತಿಯು ಇಷ್ಟಲಿಂಗದ ಮೂಲಕ ಸಂಗ್ರಹಿಸಲ್ಪಟ್ಟು ದೃಷ್ಟಿಯ ಮೂಲಕ ಒಳಕ್ಕೆ ಪ್ರವೇಶಿಸಿರುತ್ತದೆ. ಈಗ ಅದನ್ನು ಸರ್ವಾಂಗದಲ್ಲಿ ಪ್ರತಿಷ್ಠಾಪಿಸಿಕೊಳ್ಳುವಂತೆ ಧ್ಯಾನ ಮಾಡಬೇಕು. ಕಣ್ಣುಗುಡ್ಡೆಗಳನ್ನು ಕಣ್ಣಿನ ತುದಿಗೆ ತಂದು ಕೆಳಗೆ ಇಳಿಸಿದರೆ ಅದು ಹೃದಯ ಕಮಲಕ್ಕೆ, ಮೇಲಕ್ಕೆ ಎತ್ತಿದರೆ ಅದು ಭ್ರೂ ಮಧ್ಯಕ್ಕೆ ನಿಲ್ಲುತ್ತದೆ. ಈ ಎರಡರಲ್ಲಿ ಒಂದು ಕೇಂದ್ರದ ಮೇಲೆ ದೃಷ್ಟಿಯನ್ನು ನಿಲ್ಲಿಸಬೇಕು. ನಿಧಾನವಾಗಿ ಉಸಿರಾಡುತ್ತಲಿರಬೇಕು. ಉಸಿರನ್ನು ಹೊರಗೆ ಹಾಕುವಾಗ ಅಂತರಂಗದೊಳಗಿರುವ ದುರ್ವಿಕಾರಗಳನ್ನು ಹೊರಗೆ ಹಾಕುತ್ತೇವೆಂದು, ಉಸಿರನ್ನು ಒಳಗೆ ತಗೊಳ್ಳುವಾಗ ದೈವೀಶಕ್ತಿಯನ್ನು ಒಳಗೆ ತುಂಬಿಕೊಳ್ಳುತ್ತಿದ್ದೇವೆಂದು ಭಾವಿಸಬೇಕು. ಉಸಿರನ್ನು ನಾಭಿಚಕ್ರಕ್ಕೆ ತಾಗುವ ತನಕ ಒಳಗೆ ಎಳೆದುಕೊಳ್ಳಬೇಕು. ಉಚ್ಛ್ವಾಸ ನಿಶ್ವಾಸಗಳು ಸಮವಾಗಿ, ನಿಧಾನವಾಗಿ, ಆಳವಾಗಿ ಸಾಗಬೇಕು. ಮನಸ್ಸು ಮಂತ್ರವನ್ನು ಜಪಿಸುತ್ತಿರಬೇಕು.

6. ಲಿಂಗಯೋಗ: ಈ ಆರೂ ಲಿಂಗಕ್ರಿಯೆಗಳಿಂದ ಮನಸ್ಸು ಹಂತಹಂತವಾಗಿ ಮೇಲಕ್ಕೆ ಏರುತ್ತ ಹೋಗುತ್ತದೆ. ಆಗ ಪೂಜ್ಯ -ಪೂಜಕ -ಪೂಜೆ ಎಂಬ ತ್ರಿಪುಟಿಯ ಭಾವ ಅಳಿಯುತ್ತದೆ. ನಾನು ಪೂಜೆ ಮಾಡುತ್ತಿದ್ದೇನೆ ಎಂಬ ಪ್ರಜ್ಞೆಯೂ ಇಲ್ಲವಾಗುತ್ತದೆ ಲಿಂಗದೇವನೊಡನೆ ತಾದಾತ್ಮ್ಯಭಾವ ಅಳವಡುತ್ತದೆ. ಕನ್ನಡಿಯನ್ನು ನೋಡುವ ಮೊದಲು ನೋಡಬೇಕೆಂಬ ತುಡಿತವಿರುತ್ತದೆ. ಕನ್ನಡಿಯನ್ನು ನೋಡುತ್ತ ಸ್ತ್ರೀಯು ಅಲಂಕರಿಸಿಕೊಳ್ಳುವಳು; ಕನ್ನಡಿಯನ್ನು ನೋಡುತ್ತಿದ್ದೇನೆಂಬ ಅರಿವು ಸಹಿತ ಇರುವುದಿಲ್ಲ. ಹಾಗೆಯೇ ಶರಣನು ಇಷ್ಟಲಿಂಗದ ದರ್ಪಣವನ್ನು ವೀಕ್ಷಿಸುತ್ತ ತನ್ನನ್ನು ತಾನು ದರ್ಶಿಸಿಕೊಳ್ಳುವನು. ಅರ್ಥಾತ್ ಆತ್ಮಸ್ವರೂಪವನ್ನು ದರ್ಶಿಸುವನು.

ಈ ಲಿಂಗಯೋಗದಲ್ಲಿ ಪ್ರಾಣಲಿಂಗಪೂಜೆ ಮತ್ತು ಭಾವಲಿಂಗಪೂಜೆ ಎಂದು ಎರಡು ವಿಧ; ಒಂದು , ಪಿಂಡಾಂಡಗತ ಚಿಲ್ಲಿಂಗ -ಆತ್ಮಸ್ವರೂಪದರ್ಶನ ಮಾಡಿಸಿದರೆ ಇನ್ನೊಂದು ಬ್ರಹ್ಮಾಂಡಗತ ಚೈತನ್ಯವಾದ ಪರಮಾತ್ಮ -ಮಹಾಲಿಂಗದ ದರ್ಶನವನ್ನು ಮಾಡಿಸುತ್ತದೆ. ಜ್ಞಾತೃ -ತಿಳಿಯುವವನು ಜ್ಞೇಯ -ತಿಳಿಯಲ್ಪಡುವ ಪರಮಾತ್ಮ, ಜ್ಞಾನ-ತಿಳಿಯುವಿಕೆ ಈ ತ್ರಿಪುಟಿಯಳಿದು ತಾನೇ ತಾನಾದ ಸ್ಥಿತಿ ಪ್ರಾಪ್ತವಾಗುತ್ತದೆ. ಇದೇ ಲಿಂಗ ಕೂಟ.

4. ಜಂಗಮ ತತ್ವ

ಲಿಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು
ಜಂಗಮದಲ್ಲಿ ಪ್ರಸಾದವ ಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು

ಸೃಷ್ಟಿಕರ್ತ ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಪೂಜಿಸಿದರೆ ಸಾಲದು. ಅವನ ಸಾಕಾರ

ರೂಪವಾದ ಜಂಗಮವನ್ನೂ ಆರಾಧಿಸಬೇಕು. ಜಂಗಮ ಮುಖದಿಂದ ಬಂದುದು ಮಾತ್ರ ಪ್ರಸಾದವಾಗುತ್ತದೆ. ದೇವರ ಸಾಕಾರ ಕುರುಹಾದ ಇಷ್ಟಲಿಂಗವನ್ನು ಪೂಜಿಸುವುದು ಸುಲಭ. ಏಕೆಂದರೆ "ಊಡಿದೊಡುಣ್ಣದು, ನೀಡಿದೊಡರಿಯದು, ಕಾಡದು ಬೇಡದು ಶಿವಲಿಂಗವವ್ವ." ಖರ್ಚು ಕಂದಾಯವಿಲ್ಲದೆ ಪೂಜಿಸಿ, ಆನಂದಿಸಬಹುದು. ಲಿಂಗದೇವನ ಸಾಕಾರ ಮುಖವಾದ ಸಮಾಜವನ್ನು ಅರಿಯುವುದು, ಅದರ ಸೇವೆ ಮಾಡುವುದು ಬಹಳ ಕಠಿಣ, ಆದರೂ ಮಾಡಲೇ ಬೇಕು.

ಜಂಗಮ ಪದಕ್ಕೆ ಹಲವಾರು ಅರ್ಥಗಳಿವೆ. 1. ತ್ಯಾಗಿ 2. ಧರ್ಮಪ್ರಚಾರಕ 3. ಸಹ ಧರ್ಮಿ 4. ಸಮಾಜ 5. ಅಗತ್ಯವಿದ್ದವ 6. ಸಕಲ ಜೀವರಾಶಿ.

1. ಜಂಗಮನೆಂದರೆ ಸಂಸಾರವನ್ನು ನಿವೃತ್ತಿ ಮಾಡಿ ತಾಯಿತಂದೆ ಬಂಧು ಬಳಗ ಹೆಂಡತಿ ಮಕ್ಕಳು ಎಂಬ ಮೋಹವನ್ನು ಹರಿದೊಗೆದು ವೈರಾಗ್ಯದ ಬದುಕನ್ನು ಸ್ವೀಕರಿಸಿದವನು. ಸಮಷ್ಟಿ ಹಿತಕ್ಕಾಗಿ ವೈಯಕ್ತಿಕ ಸ್ವಾರ್ಥ ತೊರೆದವನು.

2. ಜಂಗಮನೆಂದರೆ ನಿರಂತರವಾಗಿ ಸಂಚರಿಸುತ್ತ ಧರ್ಮಬೋಧೆ ಮಾಡುವವನು. ಸಾಭಾರಿ ಜಂಗಮನೆಂದರೆ ಮಠವನ್ನು ಹೊಂದಿ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡವನು. ನಿರಾಭಾರಿ ಜಂಗಮವೆಂದರೆ ಸದಾ ಸಂಚಾರಿಯಾಗಿ ಧರ್ಮಪ್ರಚಾರದಲ್ಲಿ ನಿರತನಾದವನು.

3. ಜಂಗಮವೆಂದರೆ ಸಹಧರ್ಮಿ. ಗುರು ಬಸವಣ್ಣನವರ ಆದೇಶ "ನಾನೊಬ್ಬನೇ ಭಕ್ತ; ಉಳಿದುದೆಲ್ಲ ಜಂಗಮಲಿಂಗ ನೀನೇ ಅಯ್ಯಾ." ಇದರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ಭಕ್ತ ಉಳಿದವರೆಲ್ಲರು ಜಂಗಮರು.

4. ಜಂಗಮವೆಂದರೆ ಸಮಾಜ, ಗಣಂಗಳ ಒಕ್ಕೂಟ. ಜಂಗಮ ಮುಖದಿಂದ ನಿಂದೆ ಬಂದರೆ, ಕೊಂಡ ಮಾರಿಂಗೆ ಹೋಹುದು ತಪ್ಪದು. ವ್ಯಕ್ತಿಯು ತಪ್ಪು ಮಾಡಿದಾಗ ಸಮಾಜವು ಶಿಕ್ಷಿಸುವುದು ಎಂದು ಇದರ ಅರ್ಥ.

5. ಜಂಗಮವೆಂದರೆ ಅಗತ್ಯವಿದ್ದವ, needy person. ಜಂಗಮ ಎಂದರೆ ಚಲಿಸುವ, ಚೈತನ್ಯವುಳ್ಳ ಜೀವ. ಉಂಬ ಜಂಗಮ ಬಂದರೆ ನಡೆನಡೆ ಎಂಬರು. ಇದರರ್ಥ, "ಹಸಿದ ವ್ಯಕ್ತಿ" ಬಂದಾಗ ನಡೆ ಎಂದು ಹೊರದೂಡಿ ಉಣ್ಣದ ಲಿಂಗಕ್ಕೆ ಬೋನವ ಹಿಡಿಯುವುದು ಹಾಸ್ಯಾಸ್ಪದ ಎಂದಾಗುವುದು.

6. ಸಕಲ ಜೀವರಾಶಿಯು ಜಂಗಮವೆ! ಜಗತ್ತು ಸ್ಥಾವರ ಒಳಗಿರುವ ಜೀವರಾಶಿಯು ಜಂಗಮ.

ಜಂಗಮಕ್ಕೆ ಸಲ್ಲಿಸದೆ ವ್ಯಕ್ತಿಯು ಸ್ವಾರ್ಥಿಯಾಗಿ ಬದುಕಿದರೆ ಏನು ಪ್ರಯೋಜನ?! ನಿರಾಕಾರ ಲಿಂಗದ ಸಾಕಾರ ಮುಖವಾದ ಜಂಗಮಕ್ಕೆ ತನ್ನ ಆದಾಯದ ಒಂದು ಅಂಶವನ್ನು ಕಡ್ಡಾಯವಾಗಿ ನೀಡಬೇಕು.

5. ಪ್ರಸಾದ

ಧರ್ಮಗುರು ಬಸವಣ್ಣನವರು ಬೋಧಿಸಿದ ಅಮೂಲ್ಯ ತತ್ವಗಳಲ್ಲಿ ಪ್ರಸಾದ ತತ್ವವೂ ಒಂದು. ಇದು ಕೇವಲ ಊಟಕ್ಕೆ ಸಂಬಂಧಿಸಿದುದಲ್ಲ ಸಮಗ್ರ ಜೀವನಕ್ಕೆ ಸಂಬಂಧಿಸಿದ್ದು. ಪ್ರಸಾದ ಎಂದರೆ ಅನುಗ್ರಹ ಹೊಂದಿದ ವಸ್ತು - ಅರ್ಥಾತ್ ದೈವೀಕರಣಗೊಂಡ ವಸ್ತು. ಅನುಗ್ರಹ (ಕಾರುಣ್ಯ)ಕ್ಕೆ ವಚನ ವಾಙ್ಮಯದಲ್ಲಿ ಪ್ರಮುಖ ಸ್ಥಾನವಿದೆ. ಪದಾರ್ಥದಲ್ಲಿ ಅನುಗ್ರಹ ಇಳಿದಾಗ ಅದು ಪ್ರಸಾದ. ಶರೀರ, ಮನ, ಇಂದ್ರಿಯ ಎಲ್ಲವೂ ದೈವೀಕರಣಗೊಳ್ಳಬೇಕು ಎಂಬುದು ಮಹತ್ವಪೂರ್ಣ ಸಿದ್ಧಾಂತ. ಗುರು - ಲಿಂಗ - ಜಂಗಮದ ಅನುಗ್ರಹದಿಂದ ಈ ಪ್ರಸಾದ ಲಭ್ಯವಾಗುವುದು.

1. ತ್ರಿವಿಧ ಪ್ರಸಾದ: ಗುರುವಿನಿಂದ ಶುದ್ಧಪ್ರಸಾದ, ಲಿಂಗದಿಂದ ಸಿದ್ಧಪ್ರಸಾದ, ಜಂಗಮದಿಂದ ಪ್ರಸಿದ್ಧ ಪ್ರಸಾದ. ಗುರುವಿನಿಂದ ಜ್ಞಾನ, ಅನುಗ್ರಹ ಪ್ರಸಾದವೂ ಲಭ್ಯ. ದೀಕ್ಷೆ, ಮೋಕ್ಷ - ಇವು ಸಹ ಗುರುಕೊಡುವ ಜ್ಞಾನ ಪ್ರಸಾದಗಳು.

2. ಲಿಂಗ ಪ್ರಸಾದ : ದಿನ ನಿತ್ಯ ಇಷ್ಟಲಿಂಗಾರ್ಚನೆ ಮಾಡಿ ನಂತರ 3 ಬಾರಿ ತೀರ್ಥವನ್ನು ಇಷ್ಟಲಿಂಗದ ನೆತ್ತಿಯ ಮೇಲೆ ಹಾಕಿ ಕರುಣೋದಕ ಸ್ವೀಕರಿಸಲಾಗುವುದು. ಕರುಣೋದಕದ ಜೊತೆಗೆ ಕಲ್ಲುಸಕ್ಕರೆ, ದ್ರಾಕ್ಷಿ ಮುಂತಾದ ಪದಾರ್ಥಗಳನ್ನು ಇಷ್ಟಲಿಂಗದ ಮುಂದಿಟ್ಟು ತೀರ್ಥೋದಕದ ಜೊತೆಗೆ ಇಲ್ಲಿಯೇ ಗುರು ಲಿಂಗ ಜಂಗಮ ಇವೆಯೆಂದು ಭಾವಿಸಿ ತ್ರಿವಿಧ ಪ್ರಸಾದವನ್ನು ಇಲ್ಲಿಯೇ ಪಡೆಯಲಾಗುವುದಾದರೂ ಇದು ವಿಶೇಷವಾಗಿ ಲಿಂಗ ಪ್ರಸಾದ.

3. ಜಂಗಮ ಪ್ರಸಾದ : ಮನೆಗೆ ಜಂಗಮರನ್ನು (ಜಾತಿ ಜಂಗಮರಲ್ಲ ತತ್ವದ ಜಂಗಮರು) ಬರಮಾಡಿಕೊಂಡು ಅವರ ಕಡೆಯಿಂದ ಶರಣರು ಇಷ್ಟಲಿಂಗದ ಮೇಲೆ ಎರೆದ ಕರುಣೋದಕ - ಪ್ರಸಾದಗಳನ್ನು ಪಡೆದುಕೊಳ್ಳುವುದು ಜಂಗಮ ಪ್ರಸಾದ.

2. ವಿಶೇಷ ಗೌರವಕ್ಕೆ ಪಾತ್ರರಾದ ನಿಜ ಜಂಗಮರು ಪ್ರಸಾದ (ಊಟ) ಸ್ವೀಕರಿಸುವಾಗ ಅವರು ಉಣ್ಣುತ್ತಿರುವುದರಲ್ಲಿ ಸ್ವಲ್ಪವನ್ನು ಪ್ರಸಾದವನ್ನಾಗಿ ಪಡೆಯಲಾಗುವುದು. ಇದಕ್ಕೆ ಒಕ್ಕ ಪ್ರಸಾದ ಎನ್ನಲಾಗುವುದು. ಕೆಲವೊಮ್ಮೆ ಜಂಗಮರು ಉಣ್ಣುವಾಗ ತಟ್ಟೆಯಲ್ಲಿ ಹೆಚ್ಚಾದಾಗ ಅದನ್ನು ಮಿಕ್ಕ ಪ್ರಸಾದ ಎಂದು ಪಡೆಯಲಾಗುವುದು. ಮತ್ತೆ ಕೆಲವು ಸಲ ಜಂಗಮರ ತಟ್ಟೆಯಲ್ಲಿ ಹೆಚ್ಚಾಗಿ ನೀಡಿ ಮಿಕ್ಕ ಪ್ರಸಾದವೆಂದು ಬೇಡಿ ಪಡೆಯಲಾಗುವುದು. ಸಹಜ ಪ್ರಸಾದ, ಸಂಬಂಧ ಪ್ರಸಾದ ಎಂದು 2 ಬಗೆ. ಗುರು ಜಂಗಮರು ಲಭ್ಯರಾದಾಗ ಪಡೆಯುವುದು ಸಹಜ ಪ್ರಸಾದ. ಇಷ್ಟಲಿಂಗದಲ್ಲಿಯೇ ಗುರು ಜಂಗಮರು ನೆಲೆಸಿದ್ದಾರೆಂದು ಭಾವಿಸಿ ಪಡೆಯುವುದು ಸಂಬಂಧ ಪ್ರಸಾದ.

4. ನಿತ್ಯ ಪ್ರಸಾದ : ಮನುಷ್ಯನ ಜೀವನದಲ್ಲಿ ಆಹಾರವು ಅತಿ ಮುಖ್ಯ. ಆಹಾರದಂತೆ ವಿಹಾರ, ವಿಹಾರದಂತೆ ವಿಚಾರ. ಆಹಾರ - ವಿಹಾರ - ವಿಚಾರದ ಅಡಿಪಾಯದ ಮೇಲೆಯೇ ಜೀವನದ ಭವನ ಕಟ್ಟಲ್ಪಡುತ್ತದೆ. ನಾವು ತಿನ್ನುವ ಆಹಾರವು ಪ್ರಾಣಿಗಳು ತಿನ್ನುವ ಕೂಳಾಗದೆ, ಸಾಮಾನ್ಯ ಜನರು ಮಾಡುವ ಊಟವಾಗದೆ, ದೈವೀಕರಣಗೊಂಡ ಪ್ರಸಾದವಾಗಬೇಕು. ಹೀಗಾಗ ಬೇಕಾದರೆ ಅಡಿಗೆ ತಯಾರು ಮಾಡುವ ಬಗೆ, ಎಡೆ ಮಾಡುವ ರೀತಿ, ಊಟ ಮಾಡುವ ಪದ್ಧತಿ ಎಲ್ಲವೂ ದೈವೀಕರಣ ಗೊಳ್ಳಬೇಕು. ಈ ಬಗ್ಗೆ ವಿಶೇಷವಾದ ನೀತಿ ಸಂಹಿತೆಯು ಪ್ರಸಾದ ತತ್ವದಲ್ಲಿ ಇದೆ.

5. ಜ್ಞಾನ ಪ್ರಸಾದ : ಉಣ್ಣುವ ಊಟ ಪ್ರಸಾದವಾಗಬೇಕಾದರೆ ಜ್ಞಾನವು ಹಿನ್ನೆಲೆಯಲ್ಲಿರಬೇಕು. ಬೆಂಕಿ ಮುಟ್ಟಿದ್ದೆಲ್ಲವೂ ಬೆಳಕಿನ ರೂಪ ಹೊಂದುವಂತೆ ಜ್ಞಾನವು ಸ್ಪರ್ಶಿಸಿದ್ದೆಲ್ಲ ದೈವೀಕರಣ ಗೊಳ್ಳುವುದು. ಆದ್ದರಿಂದ ಜ್ಞಾನವೆಂಬ ಸಂಪತ್ತು ಹಿರಿದಾದ ನಿಧಿಯಾದ್ದರಿಂದ ತಪ್ಪದೆ ಜ್ಞಾನ ಪ್ರಸಾದವನ್ನು ಅಧ್ಯಯನ ಮತ್ತು ಶರಣರ ಒಡನಾಟದಿಂದ ಪಡೆಯಬೇಕು.

6. ಗಣ ಪ್ರಸಾದ : ಬಸವ ಧರ್ಮವು ಏಕಾಂತದ ಧರ್ಮವಲ್ಲ, ಲೋಕಾಂತದ ಧರ್ಮ. ವ್ಯಕ್ತಿಯು ಸಮಾಜದೊಡನೆಯೇ ಬೆಳೆಯಬೇಕು ಎಂದು ಬೋಧಿಸುವ ಗಣಧರ್ಮ; ಸಮೂಹ ಜೀವನಕ್ಕೆ, ಕೂಡಿ ಬದುಕಲಿಕ್ಕೆ ಆದ್ಯತೆಯನ್ನು ಕೊಡುತ್ತದೆ.

ಕಾಗೆಯೊಂದಗಳು ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ
ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ!

ಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಯಿಂದ ಕರಕಷ್ಟ ಎನ್ನುವ ಧರ್ಮಪಿತರ ವಾಣಿ ಸಮೂಹ ಜೀವನಕ್ಕೆ ಎಷ್ಟು ಮಹತ್ವ ನೀಡುವುದೆಂಬುದನ್ನು ತಿಳಿಸುತ್ತದೆ. ವ್ಯಕ್ತಿಯು ಎಷ್ಟೇ ದೊಡ್ಡವನಾಗಲಿ, ದೊಡ್ಡ ಶ್ರೀಮಂತ, ದೊಡ್ಡ ಅಧಿಕಾರಿಯಾಗಲಿ ಸಮಾಜದಲ್ಲಿ ಬೆರೆಯದಿದ್ದರೆ ಅವನು ಆಕಾಶದ ಮಾವಿನ ಹಣ್ಣಿನಂತೆ ಯಾರಿಗೂ ಎಟುಕದ ವ್ಯಕ್ತಿ. ಆದ್ದರಿಂದ ಆಗಾಗ ಗಣ ಮೇಳಾಪ, ಅನುಭವ ಗೋಷ್ಠಿಗಳಲ್ಲಿ ಭಾಗಿಯಾಗಬೇಕು. ಅಲ್ಲಿ ಸಿಗುವ ಜ್ಞಾನ ಪ್ರಸಾದ ಸ್ವೀಕರಿಸಬೇಕು. ಜೊತೆಗೆ ಎಲ್ಲರೊಡನೆ ಗಣ ಪ್ರಸಾದವನ್ನು ಸ್ವೀಕರಿಸಬೇಕು. ಶ್ರೀಮಂತನಾಗಿ ಒಬ್ಬ ವ್ಯಕ್ತಿ ಮನೆಯಲ್ಲಿ ಮೃಷ್ಟಾನ್ನ ಭೋಜನವನ್ನುಣ್ಣಬಹುದು. ಆದರೆ ಗಣ ಪ್ರಸಾದ ಮೃಷ್ಟಾನ್ನ ಭೋಜನಕ್ಕಿಂತಲೂ ಶ್ರೇಷ್ಠ.

ಅಲ್ಲಮಪ್ರಭುದೇವರು ಹೇಳುವರು :

ಪ್ರಸಾದದಲ್ಲಿ ನಿತ್ಯವ ಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು
ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನಯ್ಯ ಬಸವಣ್ಣನು

ಉಣ್ಣುವ ಪ್ರಸಾದದಲ್ಲಿ ಪರಮ ಸತ್ಯವಾದ ನಿತ್ಯವಾದ ದೇವರನ್ನು ಅಳವಡಿಸಿಕೊಂಡರಲ್ಲದೆ ನಿತ್ಯವೂ ತಪ್ಪದೆ ದಾಸೋಹವನ್ನು ಧರ್ಮಪಿತ ಬಸವಣ್ಣನವರು ಅಳವಡಿಸಿಕೊಂಡರು.

6. ದಾಸೋಹ

ವಚನ ವಾಙ್ಮಯವನ್ನು ಅಧ್ಯಯನ ಮಾಡಿದಾಗ ಇಲ್ಲಿ ದಾಸೋಹಕ್ಕೆ ಅತ್ಯಂತ ಮಹತ್ವಪೂರ್ಣ

ಸ್ಥಾನವನ್ನು ಕೊಟ್ಟಿರುವುದನ್ನು ಕಾಣಬಹುದು. ಗುರು ಬಸವಾದೇಶ ಹೀಗಿದೆ :

"ಸೋಹಂ ಎಂದು ಜನ್ಮ ಜನ್ಮಕ್ಕೆ ಹೋಗಲೀಯದೆ, ದಾಸೋಹಂ ಎನಿಸಯ್ಯ."

ಸೋಹಂ ಎಂಬ ಪದವು -ಸ -ಅಹಂ ಎಂಬ ಅಕ್ಷರಗಳಿಂದ ಆಗಿದೆ. ಸ ಎಂದರೆ ಅದು, ಆ ತತ್ವ. ಅದುವೇ ನಾನು ಎಂಬ ಅದ್ವೈತವನ್ನು ಹೇಳಿದರೆ ಅದು ಅಹಂಕಾರವಾಗಿ ಜನ್ಮಜನ್ಮಾಂತರಕ್ಕೆ ಕಾರಣವಾಗುವುದು. ಅದರ ಬದಲು ನಾನು ಪರಮಾತ್ಮನ ದಾಸ, ಸೇವಕ; ದಾಸ -ಅಹಂ ಎಂಬ ತತ್ವವನ್ನು ಅಳವಡಿಸಿಕೊಂಡರೆ ಅದು ದೇವರಲ್ಲಿ ಶರಣಾಗತ ಭಾವವನ್ನು, ವ್ಯಕ್ತಿತ್ವದಲ್ಲಿ ವಿನಯವನ್ನು ಬೆಳೆಸುವುದು. ಇಂಥ ದಾಸೋಹ ತತ್ವವನ್ನು ಧರ್ಮಪಿತ ಬಸವಣ್ಣನವರು ಒತ್ತಿ ಒತ್ತಿ ಹೇಳುವರು. ಇದರ ಅಂಗಗಳು 6 : ತನು, ಮನ, ಧನ, ಅಭಿಮಾನ, ಸಮಯ ಮತ್ತು ಪ್ರಾಣ ದಾಸೋಹ.

1. ತನು ದಾಸೋಹ : ಕಾಯಕವೇ ಕೈಲಾಸ ಎಂದು ಶರೀರವನ್ನು ಉದ್ಯೋಗದಲ್ಲಿ ತೊಡಗಿಸುವುದು ತನ್ನ ಬದುಕಿಗಾಗಿ. ಇದರ ಜೊತೆಗೆ ತನುವನ್ನು ಸಮಾಜ ಸೇವೆ, ಗುರು -ಜಂಗಮ ಸೇವೆಯಲ್ಲಿ ತೊಡಗಿಸಬೇಕು. ಕಾಯಕವು ಧನಾರ್ಜನೆಗೆ ಸೇವೆಯು ಪುಣ್ಯಾರ್ಜನೆಗಾಗಿ. ಮೈಗಳ್ಳತನವು ತನುವಿನ ಲೋಭ -ಇದು ಸಲ್ಲದು.

2. ಮನ ದಾಸೋಹ : ಮನಃ ಪೂರ್ವಕವಾಗಿ ಧರ್ಮಪ್ರಚಾರ ಮಾಡಬೇಕು. ತನ್ನಲಿರುವ ಜ್ಞಾನವನ್ನು ಇನ್ನೊಬ್ಬರಿಗೆ ಧಾರೆ ಎರೆಯಬೇಕು. ಸಕಲ ಜೀವಾತ್ಮರಿಗೆ ಲೇಸಾಗಲಿ ಎಂದು ಬಯಸುವುದು ಸಹ ಮನ ದಾಸೋಹ.

3. ಧನ ದಾಸೋಹ : ತನ್ನ ಆದಾಯವನ್ನು ಭಾಗ ಮಾಡಿ 3 ರೀತಿ ಬಳಸಬೇಕು. 1. ತನ್ನ ಜೀವಿತಕ್ಕೆ 2. ಮಾನವೀಯ ಸೇವೆಗಾಗಿ 3. ಧರ್ಮದ ಏಳ್ಗೆಗಾಗಿ. ಈ ಮೂರರಲ್ಲಿ ಯಾವುದೊಂದನ್ನೂ ಕಡೆಗಣಿಸಬಾರದು. ತನ್ನ ಬದುಕನ್ನು ಕಡೆಗಣಿಸಿ ದಾನ ಮಾಡಬೇಕಾಗಿಲ್ಲ. ತನ್ನ ಜೀವನವನ್ನು ಆದರ್ಶವೂ, ಸರಳವೂ ಆದ ರೀತಿಯಲ್ಲಿ ನಡೆಸಿ ಹೆಚ್ಚುವರಿ ಆದಾಯವನ್ನು ಮಾನವೀಯ ಸೇವಾ ಕಾರ್ಯಕ್ಕೆ ಮತ್ತು ತನ್ನ ಧರ್ಮದ ಬೆಳವಣಿಗೆಗೆ ಉಪಯೋಗಿಸಬೇಕು.

ದಾನ ಬೇರೆ ದಾಸೋಹ ಬೇರೆ. ಉಳ್ಳವರು ಇಲ್ಲದವರಿಗೆ ಕೊಡುವುದು ದಾನ; ಕರ್ತವ್ಯವೆಂದು ನೀಡುವುದು ದಾಸೋಹ. ಪುಣ್ಯಕ್ಕಾಗಿ ಮಾಡುವುದು ದಾನ, ಸಮಷ್ಟಿ ಪ್ರಜ್ಞೆಯಿಂದ, ದೇವರ ಒಲುಮೆಗಾಗಿ ಮಾಡುವುದು ದಾಸೋಹ. ದಾನ ನೀಡಿ ದಾನಿಯು ತಾನು ಶ್ರೇಷ್ಠನೆಂದು ಭಾವಿಸಿದರೆ ದಾಸೋಹಿಯು ದೇಣಿಗೆ ಪಡೆದು ಸತ್ಕಾರ್ಯ ಮಾಡಲು ನೆರವಾದ ಜಂಗಮವೇ ಶ್ರೇಷ್ಠವೆಂದು ಭಾವಿಸುವನು.

4. ಅಭಿಮಾನ ದಾಸೋಹ : ಒಬ್ಬ ವ್ಯಕ್ತಿಯಲ್ಲಿ ಕೊಡಲು ತನು ಮನ ಧನ ಇರಲಿಕ್ಕಿಲ್ಲ, ಆದರೆ ತನ್ನ ಧರ್ಮದ ಬಗ್ಗೆ ಅಭಿಮಾನ ಹೊಂದಿರುವುದೂ ಬಲು ಮುಖ್ಯ.

5. ಸಮಯ ದಾಸೋಹ : ಸಮಯವನ್ನು ಕೇವಲ ದುಡಿಮೆಗೆ , ಹೆಂಡತಿ ಮಕ್ಕಳು, ಬಂಧು ಮಿತ್ರರಿಗಾಗಿ ಮೀಸಲಿಡದೆ ಉತ್ತಮ ಮೌಲ್ಯಗಳ ಪ್ರಚಾರಕ್ಕಾಗಿ ಮೀಸಲಿಡಬೇಕು. ಪ್ರತಿಯೊಬ್ಬರೂ ಧರ್ಮ ಪ್ರಚಾರ ಮಾಡಬೇಕು.

6. ಪ್ರಾಣ ದಾಸೋಹ : ಪ್ರಸಂಗ ಬಂದರೆ ತನ್ನ ಧರ್ಮಕ್ಕಾಗಿ, ತಾನು ನಂಬಿದ ತತ್ವ ಮತ್ತು ಮೌಲ್ಯಗಳಿಗಾಗಿ ಪ್ರಾಣಕೊಡಲು ಸಿದ್ಧರಾಗಬೇಕು. ಸಮಯ ಸಾಧಕತನದಿಂದ ಯಾವ ತತ್ವವನ್ನೂ ಉಳಿಸಲು ಸಧ್ಯವಾಗದು. ಆ ನಿಷ್ಠೆ ಇದ್ದುದರಿಂದಲೇ ಹರಳಯ್ಯ -ಮಧುವರಸರು ಎಳೆಹೂಟೆಗೆ ಒಪ್ಪಿಕೊಂಡರೇ ವಿನಾ ಇಟ್ಟ ಹೆಜ್ಜೆಯನ್ನು ಹಿಂದಕ್ಕಿಡಲಿಲ್ಲ. ಶರಣರನೇಕರು ವಚನ ಸಾಹಿತ್ಯ ರಕ್ಷಣೆಗಾಗಿ ಖಡ್ಗ ಹಿಡಿದು ಹೋರಾಡಿದರು, ಪ್ರಾಣಾರ್ಪಣೆ ಮಾಡಿದರು.

ಸಮಾರೋಪ

ಈ ಎಲ್ಲ ತತ್ವಗಳನ್ನು ಅಳವಡಿಸಿಕೊಂಡು ಗುರು ಬಸವಣ್ಣನವರು "ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತ ನಿಜ ನಿವಾಸಿಯಾಗಿ ಐದಾನೆ." ಎಂದು ಅಲ್ಲಮಪ್ರಭುದೇವರು ಹೇಳುತ್ತಾರೆ. ಹೀಗೆ ಅಷ್ಟಾವರಣ, ಪಂಚಾಚಾರ, ಷಟಸ್ಥಲ, ಷಟ್‌ಕ್ರಿಯೆಗಳನ್ನು ಅಳವಡಿಸಿಕೊಂಡ ಬಸವಣ್ಣನವರು ಅನುಯಾಯಿಗಳಿಗೆ ಮಾದರಿಯಾಗಿ ನಿಲ್ಲುತ್ತಾರೆ.

– ವಿಚಾರ ಹೊಳೆದಿದ್ದು 22-9-2002ರಂದು

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು; ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು- ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ -ತಂದೆ, ಅಕ್ಕ -ತಂಗಿ, ಅಣ್ಣ -ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃ ಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಶರಣ ಮೇಳ ನಿಮಗೆಲ್ಲ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ - ಸ್ಥಿತಿ -ಲಯ - ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣ ವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಥ ಅಂಗವಾದ

ಮಹಿಳೆಯರನ್ನು ಒಳಗೊಂಡು ಬಹಳ ಜನ ದೇವರು- ಧರ್ಮ- ಸಂಸ್ಕಾರ -ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು - ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ, ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ "ಗಣ ಧರ್ಮ"ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ನೆನಹು ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

23ನೇ ಶರಣ ಮೇಳ ಕಾರ್ಯಕ್ರಮದ ವಿವರ

ದಿ: 09-01-2010	: ವಚನ ಪಠಣ ಸಪ್ತಾಹ ಉದ್ಘಾಟನೆ	ಬೆಳಿಗ್ಗೆ 08-30
ದಿ:11-01-2010	: ಶರಣ ಮೇಳದ ಚಿಂತನಗೋಷ್ಠಿ -1	ಬೆಳಿಗ್ಗೆ 10-30
ದಿ:11-01-2010	: ಶರಣ ಮೇಳದ ಚಿಂತನಗೋಷ್ಠಿ -2	ಸಂಜೆ 06-30
ದಿ:12-01-2010	: ಬಸವ ಧರ್ಮ ಮತ್ತು ಹಿಂದುಳಿದ ವರ್ಗಗಳ ಸಾಮಾಜಿಕ ಹಕ್ಕುಗಳು ವಿಶೇಷ ಸಮಾವೇಶ	ಬೆಳಿಗ್ಗೆ 10-30
ದಿ:12-01-2010	: ಧರ್ಮ ಚಿಂತನಗೋಷ್ಠಿ	ಸಂಜೆ 06-30
ದಿ:13-01-2010	: ಶರಣ ಮೇಳದ ಉದ್ಘಾಟನೆ	ಬೆಳಿಗ್ಗೆ 10-30
ದಿ:13-01-2010	: ಪೀಠಾರೋಹಣ	ಸಂಜೆ 05-30
ದಿ:14-01-2010	: ಗುರು ದರ್ಶನ, ಗಣಲಿಂಗ ದರ್ಶನ	ಬೆಳಿಗ್ಗೆ 09-30
ದಿ:14-01-2010	: ಸಮುದಾಯ ಪ್ರಾರ್ಥನೆ -ವಚನ ಪಠಣ	ಬೆಳಿಗ್ಗೆ 11-00
ದಿ:14-01-2010	: ಮೆರವಣಿಗೆ ಪಥ ಸಂಚಲನ	ಸಂಜೆ 07-00
ದಿ:15-01-2010	: ಶ್ರೀ ಸಿದ್ಧರಾಮೇಶ್ವರ ಜಯಂತಿ ಮತ್ತು ಸಮಾರೋಪ ಸಮಾರಂಭ	ಬೆಳಿಗ್ಗೆ 10-30

ಮಧ್ಯೆ ವಿವಿಧ ಸ್ಪರ್ಧೆಗಳು ಇರುತ್ತವೆ. ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಯೋಗಾಸನ, ಪ್ರಾಣಾಯಾಮ, ಧ್ಯಾನ ತರಬೇತಿ

ಹರದ್ವಾರದ ಶ್ರೀ ಪತಂಜಲಿ ಯೋಗಾಶ್ರಮದ, ಪೂಜ್ಯ ಶ್ರೀ ರಾಮದೇವ ಬಾಬಾ ಅವರ ಯೋಗ ಮಾರ್ಗದಲ್ಲಿ ಪರಿಣಿತರಾಗಿರುವ ಮೈಸೂರಿನ ಶರಣ. ಜಿ.ಮಧು ಮತ್ತು ಶರಣ. ಗೋವಿಂದ ರಾಜುರವರು ಯೋಗಾಸನ, ಪ್ರಾಣಾಯಾಮ, ಧ್ಯಾನದ ತರಗತಿಗಳನ್ನು ದಿ.11.01-10ರಿಂದ 15ರವರೆಗೆ ಪ್ರತಿನಿತ್ಯ ಬೆಳಗಿನ ಜಾವ 5ರಿಂದ 6-30ರವರೆಗೆ ನಡೆಸಲಿದ್ದಾರೆ. 7-30ರಿಂದ 8-30ರವರೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ / ಬಸವಾರ್ಚನೆ ನಡೆಯುತ್ತದೆ.

ಸ್ವಯಂ ಸೇವಕರಿಗೆ ಕರೆ

ಶರಣ ಮೇಳ ಬೃಹತ್ ಸಮಾವೇಶ. ಎಷ್ಟು ಜನ ಕಾರ್ಯಕರ್ತರಿದ್ದರೂ ಕಡಿಮೆಯೆ. ಶರಣ ಬಂಧುಗಳು ಈ ಪವಿತ್ರ ಸಮಾವೇಶದಲ್ಲಿ ಸೇವೆ ಮಾಡಬೇಕೆಂದು ಜನವರಿ ಮೊದಲನೆಯ ವಾರದಲ್ಲಿ ಬರುವ ಮನಸ್ಸು ಮಾಡಬೇಕು. ಶರಣ ಮೇಳದ ಸಮಯದಲ್ಲಿ ದಾಸೋಹ ಮಂಟಪ, ಪಾಕ ಗೃಹ, ಸಭಾ ಮಂಟಪದಲ್ಲಿ ಸೇವೆ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರಬೇಕೆಂದು ಆಶಿಸುವೆವು. ದೇಣಿಗೆ ಸಂಗ್ರಹಕ್ಕೆ ರಸೀತಿ ಪುಸ್ತಕ ಬಂದಿಲ್ಲದಿದ್ದರೆ ದೂರವಾಣಿ ಮೂಲಕ ಸಂಪರ್ಕಿಸಿ, ರಸೀತಿ ಪುಸ್ತಕ ತರಿಸಿಕೊಂಡು, ದೇಣಿಗೆ ಸಂಗ್ರಹಿಸಿಕೊಂಡು ಬರಬೇಕು.



ಾ.22-11-2009 ರಂದು ಬಳ್ಳಾರಿಯ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ಪೂಜ್ಯ ಶ್ರೀ
ಜಗದ್ಗುರು ಮಾತೆ ಗಂಗಾದೇವಿಯವರಿಂದ ಶರಣ ಮೇಳ ಪ್ರಚಾರ ಕಾರ್ಯಕ್ರಮದ ಉದ್ಘಾಟನೆ.
ಧ್ಯಕ್ಷೆ ಶರಣೆ ಶಾರದಾ ತಾಯಿ, ಪೂಜ್ಯ ಮಾತೆ ಬಸವರತ್ನಾದೇವಿ, ಮತ್ತು ಶರಣ ಬಂಧುಗಳು
ಚಿತ್ರದಲ್ಲಿಅದ್ದಾರೆ.



ಳ್ಳಾರಿಯ ರಾಷ್ಟ್ರೀಯ ಬಸವ ದಳದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ. ವಚನ ಶ್ರೀ ಪಾಟೀಲ್
ಮತ್ತು ಸಂಗಡಿಗರಿಂದ ಕಿತ್ತೂರು ಚನ್ನಮ್ಮ ನಾಟಕದ ಒಂದು ದೃಶ್ಯ